# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ ಬುಧವಾರ, ಫೆಬ್ರವರಿ 17, 2021

ಸಂಪುಟ : 47 ಸಂಚಿಕೆ : 289 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಫಾಸ್ಟ್‌ಟ್ಯಾಗ್ ಜೊತೆ ಸಮಸ್ಯೆ ಕಡ್ಡಾಯ !

### ಸರ್ವರ್ ಡೌನ್, ತಾಂತ್ರಿಕ ತೊಡಕುಗಳಿಂದ ಟೋಲ್‌ಗಳಲ್ಲಿ ಬಳಲಿದ ಚಾಲಕರು

ಎಸ್.ಎ. ಶ್ರೀನಿವಾಸ್

ದಾವಣಗೆರೆ, ಫೆ. 16 - ಫಾಸ್ಟ್‌ಟ್ಯಾಗ್ ಸರಿಯಾಗಿದೆ ಆದರೂ ಆನ್‌ಲೈನ್ ಮೂಲಕ ಹಣ ಪಾವತಿಸಲು ಆಗುತ್ತಿಲ್ಲ... ಫಾಸ್ಟ್‌ಟ್ಯಾಗ್ ಕೆ.ವೈ.ಸಿ. ಆಗಿಲ್ಲದ ಕಾರಣ ಹಣ ಪಾವತಿ ಇಲ್ಲ... ಫಾಸ್ಟ್‌ಟ್ಯಾಗ್‌ನಲ್ಲಿ ಇರುವ ವಿವರಕ್ಕೂ ವಾಹನಕ್ಕೂ ವ್ಯತ್ಯಾಸ ಇದೆ...ಫಾಸ್ಟ್‌ಟ್ಯಾಗ್‌ನಲ್ಲಿ ಹಣ ಖಾಲಿ ಆಗಿದೆ ಹಾಕಿಸಿಕೊಳ್ಳೋದಕ್ಕೆ ಬರುತ್ತಿಲ್ಲ... ಇವು ಹೆಬ್ಬಾಳಿನ ಎನ್‌ಹೆಚ್‌ಎಐ ಟೋಲ್ ಬಳಿ ವಾಹನ ಮಾಲೀಕರು ಹೇಳಿಕೊಳ್ಳುತ್ತಿದ್ದ ದೂರುಗಳು.

ಮಂಗಳವಾರದಿಂದ ಟೋಲ್ ಪಾವತಿಗೆ ಫಾಸ್ಟ್‌ಟ್ಯಾಗ್ ಕಡ್ಡಾಯವಾಗಿದೆ. ನಗದಾದರೆ ದುಪ್ಪಟ್ಟು ಟೋಲ್ ನೀಡಬೇಕು. ಹೀಗಾಗಿ ದುಡ್ಡೇ ದೊಡ್ಡಪ್ಪ ಎಂದುಕೊಂಡಿದ್ದವರೆಲ್ಲಾ ಫಾಸ್ಟ್‌ಟ್ಯಾಗ್ ಎಲ್ಲಿದೆಯಪ್ಪ ಎಂದು ಮುಗಿ ಬಿದ್ದಿದ್ದಾರೆ.



ಹೆಬ್ಬಾಳು ಟೋಲ್ ಬಳಿ ಕಾರೊಂದಕ್ಕೆ ಫಾಸ್ಟ್‌ಟ್ಯಾಗ್ ಅಂಟಿಸುತ್ತಿರುವುದು...

ಟೋಲ್ ಬಳಿ ಫಾಸ್ಟ್‌ಟ್ಯಾಗ್ ಮಾರಾಟದ ಭರಾಟೆ ಜೋರಾಗಿತ್ತು. ಇಡೀ ದಿನ ಟೋಲ್ ಬಳಿ ಠಿಕಾಣಿ ಹೂಡಿದರೂ ನಾಲ್ಕೈದು ಟ್ಯಾಗ್ ಮಾರುವುದು ಕಷ್ಟವಾಗಿತ್ತು. ಮಂಗಳವಾರ ಮಧ್ಯಾಹ್ನದ ವೇಳೆಗೇ 20ಕ್ಕೂ ಹೆಚ್ಚು ಟ್ಯಾಗ್‌ಗಳು ಮಾರಾಟವಾಗಿವೆ. ಇರುವ (4ನೇ ಪುಟಕ್ಕೆ)

#### ಫಾಸ್ಟ್‌ಟ್ಯಾಗ್ ಕೆಲಸ ಮಾಡದಿದ್ದರೆ ಹಣ ಕೊಡಬೇಕಿಲ್ಲ

**ಫಾಸ್ಟ್‌ಟ್ಯಾಗ್ ಸಮರ್ಪಕವಾಗಿದ್ದೂ ಟೋಲ್‌ಗಳಲ್ಲಿ ಹಣ ಪಾವತಿಸಲು ಆಗದಿದ್ದರೆ ಅಂತಹ ವಾಹನಗಳು ಉಚಿತವಾಗಿ ಪ್ರಯಾಣಿಸಬಹುದು. ಫಾಸ್ಟ್‌ಟ್ಯಾಗ್ ಕೆಲಸ ಮಾಡದೇ ಇದ್ದಾಗ ನೆರವು ಸಂಖ್ಯೆಯಾದ 1033ಕ್ಕೆ ಕರೆ ಮಾಡಬೇಕು. ಅಲ್ಲಿ ಫಾಸ್ಟ್‌ಟ್ಯಾಗ್ ಸಮರ್ಪಕವಾಗಿದೆ, ಆದರೂ ಟೋಲ್‌ನಲ್ಲಿ ಹಣ ಸಂಗ್ರಹಿಸಲು ಆಗುತ್ತಿಲ್ಲ ಎಂಬುದು ಖಚಿತವಾದರೆ** (4ನೇ ಪುಟಕ್ಕೆ)

## 6,7,8 ಪೂರ್ಣ ತರಗತಿ

### ಫೆ. 22 ರಿಂದ ಆರಂಭ, 1ರಿಂದ 5ನೇ ತರಗತಿ ಆರಂಭದ ಬಗ್ಗೆ ಫೆ.24ರಂದು ನಿರ್ಧಾರ : ಸಚಿವ ಸುರೇಶ್ ಕುಮಾರ್

ಬೆಂಗಳೂರು, ಫೆ. 16- ಈ ತಿಂಗಳ 22 ರಿಂದ 6 ರಿಂದ 8ನೇ ತರಗತಿಗಳನ್ನು ಪೂರ್ಣ ಪ್ರಮಾಣದಲ್ಲಿ ಆರಂಭಿಸಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಸುರೇಶ್ ಕುಮಾರ್ ಪ್ರಕಟಿಸಿದ್ದಾರೆ.

ಶಾಲೆಗಳನ್ನು ಆರಂಭಿಸುವ ಸಂಬಂಧ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಹಾಗೂ ಶಿಕ್ಷಣ ತಜ್ಞರೊಂದಿಗೆ ಸಮಾಲೋಚನೆ ನಂತರ ಸುದ್ದಿಗೋಷ್ಠಿಯಲ್ಲಿ ಸರ್ಕಾರದ ನಿರ್ಧಾರ ಪ್ರಕಟಿಸಿದ್ದಲ್ಲದೆ, 1 ರಿಂದ 5 ನೇ ತರಗತಿಗಳನ್ನು ಆರಂಭಿಸುವ ಸಂಬಂಧ ಇದೇ 24 ರಂದು ಸಭೆ ಸೇರಿ ತೀರ್ಮಾನ ಕೈಗೊಳ್ಳುವುದಾಗಿ ಹೇಳಿದರು.

ಒಂದರಿಂದ 5ನೇ ತರಗತಿಗಳನ್ನು ಆರಂಭಿಸಬೇಕೋ ಅಥವಾ ವಿದ್ಯಾಗಮ ಆರಂಭಿಸಬೇಕೋ ಎಂಬ ಬಗ್ಗೆ ಈ ತಿಂಗಳ 24 ಮತ್ತು 25ರಂದು ತಜ್ಞರ ಜೊತೆ ಸಭೆ ನಡೆಸಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದೇವೆ, ಸದ್ಯದ ಪರಿಸ್ಥಿತಿಯಲ್ಲಿ 1 ರಿಂದ 5ನೇ ತರಗತಿಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದವರು ಹೇಳಿದ್ದಾರೆ.



ಶಾಲೆಗಳನ್ನು ಆರಂಭಿಸುವ ಆತುರವಿಲ್ಲ, ಸದ್ಯಕ್ಕೆ ಆನ್‌ಲೈನ್ ಮತ್ತು ವಿದ್ಯಾಗಮ ಕಾರ್ಯಕ್ರಮ ನಡೆಯುತ್ತಿರುವುದರಿಂದ ಶೈಕ್ಷಣಿಕ ಚಟುವಟಿಕೆಗೆ ಯಾವುದೇ ತೊಂದರೆಯಾಗುವುದಿಲ್ಲ, ಏನೇ ನಿರ್ಧಾರ ಕೈಗೊಂಡರೂ ವಿದ್ಯಾರ್ಥಿಗಳ ಸುರಕ್ಷತೆ ಮೊದಲ ಆದ್ಯತೆ ಎಂದು ಸ್ಪಷ್ಟಪಡಿಸಿದರು.

ತಜ್ಞರ ಸಲಹೆಯಂತೆ ಈಗಾಗಲೇ 9ರಿಂದ 12 ನೇ ತರಗತಿಗಳು ಆರಂಭಗೊಂಡಿವೆ, ಇದೀಗ 6 ರಿಂದ 8ನೇ ತರಗತಿವರೆಗೂ ಆರಂಭಿಸಲಾಗುವುದು, ಇದುವರೆಗೂ ಈ ತರಗತಿಗಳಿಗೆ ವಿದ್ಯಾಗಮ ಕಲಿಕೆ ಅಡಿಯಲ್ಲಿ ಪಾಠ ಪ್ರವಚನ ನಡೆಯುತ್ತಿವೆ. ಕೇರಳದಲ್ಲಿ ಕೊರೊನಾ ಸೋಂಕು (4ನೇ ಪುಟಕ್ಕೆ)

## 57 ಕೆರೆ ತುಂಬಿಸುವ ಕಾಮಗಾರಿ ತ್ವರಿತವಾಗಿ ನಡೆಯುತ್ತಿಲ್ಲ: ಸಂಸದ

ಜಗಳೂರು, ಫೆ.16 - 57 ಕೆರೆ ತುಂಬಿಸುವ ಯೋಜನೆ ಕಾಮಗಾರಿ ತ್ವರಿತಗತಿಯಲ್ಲಿ ನಡೆಯುತ್ತಿಲ್ಲ ಎಂದು ಸಂಸದ ಜಿ.ಎಂ ಸಿದ್ದೇಶ್ವರ್ ಅಸಮಾಧಾನ ವ್ಯಕ್ತಪಡಿಸಿದರು

ಹರಿಹರ ತಾಲ್ಲೂಕಿನ ದೀಟೂರು ಬಳಿ 660 ಕೋಟಿ ವೆಚ್ಚದ ಜಗಳೂರು ತಾಲ್ಲೂಕಿನ 57 ಕೆರೆ ತುಂಬಿಸುವ ಯೋಜನೆಯ ಜಾಕ್ ವೆಲ್ ಕಾಮಗಾರಿ ವೀಕ್ಷಿಸಿ ನಂತರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಜಗಳೂರು ತಾಲ್ಲೂಕಿನ ಜನತೆಗೆ ಜೂನ್

#### ಜಾಕ್ ವೆಲ್ ಕಾಮಗಾರಿ ವೀಕ್ಷಿಸಿದ ಸಿದ್ದೇಶ್ವರ

ಜುಲೈ ವೇಳೆಗೆ ಮೊದಲ ಹಂತದಲ್ಲಿ 17 ಕೆರೆಗಳಿಗೆ ನೀರು ತುಂಬಿಸುವ ಭರವಸೆ ನೀಡಿದ್ದು. ದೀಟೂರುನಿಂದ ಚಟ್ನಹಳ್ಳಿ ಗುಡ್ಡದವರೆಗೆ 31 ಕಿ.ಮೀ ದೂರದ ಪೈಪ್ ಲೈನ್ ಕಾಮಗಾರಿಯಲ್ಲಿ 13.5 ಕಿ.ಮೀ ಕಾಮಗಾರಿ ಬಾಕಿ ಉಳಿದಿದೆ ಎಂದು (4ನೇ ಪುಟಕ್ಕೆ)

## 20ರಿಂದ 'ಹಳ್ಳಿ ಕಡೆಗೆ ನಮ್ಮ ನಡಿಗೆ'

### ಗ್ರಾಮಾಭಿವೃದ್ಧಿಗೆ ಜಿಲ್ಲಾಡಳಿತಕ್ಕೆ ಪೂರ್ಣಾಧಿಕಾರ : ಅಶೋಕ್

ಬೆಂಗಳೂರು, ಫೆ. 16- ಗ್ರಾಮೀಣರ ಸ್ಥಿತಿಗತಿ ಅರಿಯಲು ಸರ್ಕಾರವೇ ಅವರ ಮನೆ ಬಾಗಿಲಿಗೆ ಹೋಗಲಿದೆ. ಸ್ಥಳೀಯರ ಸಮಸ್ಯೆ ಅರಿಯುವುದರ ಜೊತೆಗೆ ಅಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸ್ಥಳದಲ್ಲೇ ಪರಿಶೀಲಿಸಿ, ಚಾಲನೆ ನೀಡಲು ಜಿಲ್ಲಾಡಳಿತಕ್ಕೆ ಸರ್ಕಾರ ಪೂರ್ಣ ಅಧಿಕಾರ ನೀಡಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ್ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು, ಇದೇ 20ರಿಂದ 'ಹಳ್ಳಿಯ ಕಡೆಗೆ ನಮ್ಮ ನಡಿಗೆ' ಕಾರ್ಯಕ್ರಮ ಆರಂಭಿಸಲಾಗುವುದು ಎಂದರು.

ಅಂದು ಜಿಲ್ಲಾಧಿಕಾರಿಗಳು ಜಿಲ್ಲೆಯ ಯಾವುದಾದರೂ ಗ್ರಾಮದಲ್ಲಿ ಹಾಗೂ ತಹಸೀಲ್ದಾರ್, ತಮ್ಮ ತಾಲ್ಲೂಕುಗಳ ವ್ಯಾಪ್ತಿಯ ಒಂದು ಗ್ರಾಮಕ್ಕೆ ತೆರಳಿ ಅಲ್ಲಿಯೇ ವಾಸ್ತವ್ಯ ಹೂಡಿ, ಜನರ ಸಮಸ್ಯೆಗಳನ್ನು ಆಲಿಸಿ (2ನೇ ಪುಟಕ್ಕೆ)

**ಅಧಿಕಾರಿಗಳು ಯಾವುದೇ ಮನೆಯಲ್ಲಿ ವಾಸ್ತವ್ಯ ಮಾಡುವಂತಿಲ್ಲ. ಗ್ರಾಮದ ಶಾಲೆ, ಇಲ್ಲವೇ ಸಮುದಾಯ ಭವನ ಅಥವಾ ವಸತಿ ನಿಲಯಗಳಲ್ಲಿ ವಾಸ್ತವ್ಯ ಮಾಡಬೇಕು. ಮಹಿಳಾ ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರರಿಗೂ ಗ್ರಾಮ ವಾಸ್ತವ್ಯ ಕಡ್ಡಾಯ**

**- ಆರ್.ಅಶೋಕ್, ಸಚಿವ**

## ಎಲ್ಲಾ ಗ್ರಾ.ಪಂ.ಗಳಲ್ಲೂ ಸೌರಶಕ್ತಿ ಅಳವಡಿಕೆ : ಸಚಿವ ಈಶ್ವರಪ್ಪ

ಬೆಂಗಳೂರು, ಫೆ. 16- ಗ್ರಾಮ ಪಂಚಾಯ್ತಿಗಳ ನೂತನ ಸದಸ್ಯರಿಗೆ ಸಾಮರ್ಥ್ಯ ಅಭಿವೃದ್ಧಿ ತರಬೇತಿ ಕಾರ್ಯಕ್ರಮಕ್ಕೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಕೆ.ಎಸ್.ಈಶ್ವರಪ್ಪ ಚಾಲನೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ 5,728 ಗ್ರಾಮ ಪಂಚಾಯತ್‌ಗಳ 90,729 ಸದಸ್ಯರಿಗೆ

#### ಗ್ರಾ.ಪಂ. ಸದಸ್ಯರ ತರಬೇತಿಗೆ ಚಾಲನೆ

ಐದು ದಿನಗಳಲ್ಲಿ ಹಂತ ಹಂತವಾಗಿ ತರಬೇತಿ ನೀಡಲಾಗುತ್ತದೆ ಎಂದರು.

ಗ್ರಾಮ ಪಂಚಾಯತ್ ಸದಸ್ಯರಿಗೆ 10 ತಂಡಗಳಲ್ಲಿ ತರಬೇತಿ ನೀಡಲಾಗುತ್ತಿದೆ, 850 ಸಂಪನ್ಮೂಲ ವ್ಯಕ್ತಿಗಳು, 285 ಕೇಂದ್ರಗಳಲ್ಲಿ ತರಬೇತಿ (2ನೇ ಪುಟಕ್ಕೆ)




# ಪ್ರಬಲರು ದುರ್ಬಲರನ್ನು ಪ್ರೋತ್ಸಾಹಿಸುವ ಕೆಲಸ ಮಾಡಬೇಕು

## ಕುಂಬಾರ ಗುಂಡಯ್ಯ ಗುರುಪೀಠದ ಗಣಪತಿ ದೇವಸ್ಥಾನದ ಕಾರ್ಯಕ್ರಮದಲ್ಲಿ ಮುರುಘಾ ಶರಣರು

ಚಿತ್ರದುರ್ಗ, ಫೆ.16- ಪ್ರಬಲರು ದುರ್ಬಲರನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡಿದಾಗ ಮಾತ್ರ ದುರ್ಬಲರು ಪ್ರಗತಿ ಕಾಣಲು ಸಾಧ್ಯ. ಈ ನಿಟ್ಟಿನಲ್ಲಿ ಆದಿಚುಂಚನಗಿರಿ ಮತ್ತು ಚಿತ್ರದುರ್ಗದ ಮುರುಘಾಮಠ ಕೆಲಸ ಮಾಡುತ್ತಾ ಬಂದಿದೆ ಎಂದು ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಇಲ್ಲಿಗೆ ಸಮೀಪದ ಕುಂಬಾರ ಗುಂಡಯ್ಯ ಗುರುಪೀಠದಲ್ಲಿ ಶ್ರೀ ಗಣಪತಿ ದೇವಸ್ಥಾನದಲ್ಲಿ ನಿನ್ನೆ ಏರ್ಪಾಡಾಗಿದ್ದ ಮೂರ್ತಿ ಪ್ರತಿಷ್ಠಾಪನೆ ಹಾಗೂ ಸಮುದಾಯ ಭವನದ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ವಹಿಸಿ, ಶರಣರು ಆಶೀರ್ವಚನ ನೀಡಿದರು.

ಕೃಷಿಯಷ್ಟೇ ಮುಖ್ಯವಾದದ್ದು ಕುಂಬಾರ ಕಲೆ. ರೈತ ಬೆಳೆದ ಭತ್ತ, ಜೋಳ, ರಾಗಿ ಇತ್ಯಾದಿ ಆಹಾರ ಬೆಳೆಗಳನ್ನು ಬೇಯಿಸಿ ಊಟ ಮಾಡಲು ಕುಂಬಾರ ಸಿದ್ಧಪಡಿಸಿದ ಮಡಕೆ ಬಹಳ ಮುಖ್ಯವಾಗಿದೆ. ಅಂತಹ ಕುಂಬಾರ ಕಲೆ ಬಹಳ ಪ್ರಾಚೀನವಾದದ್ದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕುಂಬಾರ ಸಮಾಜದ ಗುಂಡಯ್ಯನವರನ್ನು ಅಂದು ಬಸವಣ್ಣನವರು ಗುರುತಿಸಿದ್ದರು. ಇಂದು ಈ ಸಮಾಜದ ಸಂಘಟನೆಗಾಗಿ ನಾವು ಗುರುಗಳನ್ನು ನೀಡಿದ್ದೇವೆ. ಸಣ್ಣ ಸಮಾಜಗಳು ಸಂಘಟನೆ-ಶಕ್ತಿ ಮೂಲಕ ಸರ್ಕಾರದ ಗಮನ ಸೆಳೆಯಬೇಕು. ಮೀಸಲಾತಿಯ ಕಾಲ ಹಿಂದಿತ್ತು. ಈಗ ಅದೇ



**ಸಮ ಸಮಾಜದ ನಿರ್ಮಾಣ ದಿಂದ ಮಾತ್ರ ದುರ್ಬಲರಿಗೆ ಶಕ್ತಿ.**
**- ಶ್ರೀ ಆದಿಚುಂಚನಗಿರಿ ಸ್ವಾಮೀಜಿ ಅಭಿಮತ**

ಮೀಸಲಾತಿಯ ಕಾಲ ಬಂದಿದೆ. ಎಲ್ಲಾ ಸಮಾಜದವರು ತಮ್ಮ ಹಕ್ಕುಗಳಿಗಾಗಿ ಬೀದಿಗಿಳಿದು ಹೋರಾಟ ಮಾಡುತ್ತಿದ್ದಾರೆ. ಸಿಎಂ ಯಡಿಯೂರಪ್ಪನವರು ಕೂಡಾ ಹೋರಾಟಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿರುವುದು ಸ್ವಾಗತಾರ್ಹ ಎಂದು ಶರಣರು ನುಡಿದರು.

ಆದಿಚುಂಚನಗಿರಿ ಮಠದ ಡಾ. ನಿರ್ಮಲಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಬಸವಣ್ಣನವರ ಸಮ ಸಮಾಜ ನಿರ್ಮಾಣವಾದಾಗ ಮಾತ್ರ ದುರ್ಬಲ ಸಮಾಜಗಳಿಗೆ ಶಕ್ತಿ ಬರುತ್ತದೆ. ಈ ನಿಟ್ಟಿನಲ್ಲಿ ಸರ್ಕಾರಗಳು ಸಣ್ಣ ಸಮುದಾಯಗಳಿಗೆ ಪ್ರೋತ್ಸಾಹ ನೀಡಬೇಕು ಎಂದರು.


ಕುಂಬಾರ ಸಮಾಜ ಬಹಳ ಪ್ರಾಚೀನ ಕಲೆ, ಸಂಸ್ಕೃತಿ ಹೊಂದಿದ್ದು, ಸಮಾಜದ ಕುಲಕಸುಬುಗಳಿಗೆ ಸರ್ಕಾರ ಬೆಂಬಲ ನೀಡಬೇಕೆಂದು ಸ್ವಾಮೀಜಿ ಹೇಳಿದರು. ಮೈಸೂರು ಸಂಸ್ಥಾನದಲ್ಲಿ ಒಕ್ಕಲಿಗ ಸಮಾಜದ ಕೆ.ಹೆಚ್. ರಾಮಯ್ಯ ಅವರು ಹಿಂದುಳಿದ ಸಮಾಜಗಳ ಪರವಾಗಿ ಅಂದೇ ಕೆಲಸ ಮಾಡಿದ್ದರೆಂದು ಶ್ರೀಗಳು ಸ್ಮರಿಸಿದರು.

ಮಾಜಿ ಸಚಿವ ಹೆಚ್. ಆಂಜನೇಯ ಮಾತನಾಡಿ, ನಶಿಸಿ ಹೋಗುತ್ತಿರುವ ಕುಂಬಾರರ ಕಲೆಯನ್ನು ಉಳಿಸಿ, ಬೆಳೆಸಬೇಕು. ಈ ಸಮುದಾಯದ ನಿರ್ಮಾಣಕ್ಕೆ ನಾನು ಸಚಿವನಾಗಿದ್ದಾಗ 50 ಲಕ್ಷ ರೂಪಾಯಿ ಅನುದಾನ ನೀಡಿದ್ದೆ ಎಂದರು.

ಶಾಸಕ ಹೆಚ್. ತಿಪ್ಪಾರೆಡ್ಡಿ ಮಾತನಾಡಿದರು. ಶ್ರೀ ಶಿವಲಿಂಗಾನಂದ ಸ್ವಾಮೀಜಿ, ಶ್ರೀ ಮಾದಾರ ಚನ್ನಯ್ಯ ಸ್ವಾಮೀಜಿ, ಶ್ರೀ ಬಸವ ಕುಂಬಾರ ತಿಪ್ಪೇಸ್ವಾಮೀಜಿ, ಶ್ರೀ ಬಸವ ಕುಂಬಾರಮೂರ್ತಿ ಸ್ವಾಮೀಜಿ, ಶ್ರೀ ಬಸವ ಕುಂಬಾರ ಗುಂಡಯ್ಯ ಶರಣರು ಸಾನ್ನಿಧ್ಯ ವಹಿಸಿದ್ದರು.

ಕುಂಬಾರ ಗುರುಪೀಠದ ಅಧ್ಯಕ್ಷ ನರಸಿಂಹಪ್ಪ, ಕುಂಬಾರ ಮಹಾಸಭಾದ ರಾಜ್ಯಾಧ್ಯಕ್ಷ ಶಿವಕುಮಾರ್ ಚೌಡಶೆಟ್ಟಿ, ನೌಕರರ ಸಂಘದ ಶ್ರೀನಿವಾಸ್, ತಿಪ್ಪೇಸ್ವಾಮಿ, ನಿಟ್ಟೂರಿನ ಕೆ. ಏಕಾಂತಪ್ಪ, ಕೆ. ಸಂಜೀವಮೂರ್ತಿ, ದಾವಣಗೆರೆಯ ಕೆ.ಎನ್. ಚಂದ್ರಶೇಖರ್, ನಾಗರಾಜ್ ಕುಂಬಾರ, ಮುಸ್ಟೂರಪ್ಪ, ಹಿಂಡಸಘಟ್ಟ ತಿಪ್ಪೇಸ್ವಾಮಿ, ಜಿ. ಬೇವಿನಹಳ್ಳಿಯ ಹೆಚ್.ಬಿ. ಶ್ರೀಕಾಂತ್, ಜಿಗಳಿಯ ಜಿ. ಆನಂದಪ್ಪ, ಪತ್ರಕರ್ತ ಪ್ರಕಾಶ್ ಇನ್ನಿತರರಿದ್ದರು.

## ಸಂತರು, ದಾರ್ಶನಿಕರು, ಶರಣರು ಎಲ್ಲಾ ಜಾತಿಗೂ ಸಿಮೀತವಾಗಿದ್ದರು




ಕೊಟ್ಟೂರು, ಫೆ. 16 – ಎಲ್ಲಾ ಜನಾಂಗಗಳಲ್ಲಿ ಸಂತರು, ದಾರ್ಶನಿಕರು, ಶರಣರು, ಸಮಾಜ ಸುಧಾರಕರು ಇದ್ದು ಅವರೆಲ್ಲರು ಅವರ ಜಾತಿಯವರಿಗೆ ಮಾತ್ರ ಸೀಮಿತರಾಗದೇ ಇಡೀ ಮನುಕುಲದ ಏಳಿಗೆಗಾಗಿ ಶ್ರಮಿಸಿ ಅಮರರಾಗಿದ್ದಾರೆ. ಅಂತಹ ದಾರ್ಶನಿಕರಲ್ಲಿ ಸಂತ ಸೇವಾಲಾಲರೂ ಒಬ್ಬರಾಗಿದ್ದಾರೆ ಎಂದು ಸಂಸದ ವೈ.ದೇವೇಂದ್ರಪ್ಪ ತಿಳಿಸಿದರು.

**ಕೊಟ್ಟೂರಿನ ಕಾರ್ಯಕ್ರಮದಲ್ಲಿ ಸಂಸದ ವೈ.ದೇವೇಂದ್ರಪ್ಪ**

ಇಲ್ಲಿನ ತಾಲ್ಲೂಕು ಕಛೇರಿಯಲ್ಲಿ ಸಂತ ಸೇವಾಲಾಲ್ ಮಹಾರಾಜರ 282 ನೇ ವರ್ಷದ ಜಯಂತಿಯಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಸಂತ ಸೇವಾಲಾಲರು ಹಸಿದವರಿಗೆ ಅನ್ನ, ಬಾಯಾರಿದವರಿಗೆ ನೀರು ಪ್ರಾಪ್ತಿ ಮಾಡಲು ಶ್ರಮಿಸಬೇಕು ಎಂದು ಸಂದೇಶ ನೀಡಿ ಮಾನವೀಯ ಮೌಲ್ಯ ಮರೆದಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಾ.ಪಂ ಅಧ್ಯಕ್ಷ ಗುರುಮೂರ್ತಿ ಶಾನುಭೋಗರ್, ತಹಶೀಲ್ದಾರ್ ಜಿ.ಅನಿಲ್ ಕುಮಾರ್, ವೆಂಕಟೇಶ್ ನಾಯ್ಕ್, ಜಿ.ಪಂ ಸದಸ್ಯೆ ಉಮಾದೇವಿ , ಕೊಟ್ರೇಶ್, ಭೀಮಾನಾಯ್ಕ್, ಕೃಷ್ಣನಾಯ್ಕ್, ಜಯಪ್ರಕಾಶ್ ನಾಯ್ಕ್, ಏರ್‌ಟೆಲ್ ಚಂದ್ರು, ನಾಗ್ಯನಾಯ್ಕ್, ತಿಂದಪ್ಪ ಮತ್ತಿತರರು ಹಾಜರಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಸಿ. ಎಂ.ಗುರುಬಸವರಾಜ್ ನೆರವೇರಿಸಿದರು.

## ಮೇ ತಿಂಗಳಲ್ಲಿ ಗ್ರಾಮ ದೇವತೆ ಜಾತ್ರೆ



**ಹಡಗಲಿ**

ಹಡಗಲಿ, ಫೆ. 16- ಪಟ್ಟಣದ ಗ್ರಾಮ ದೇವತೆ ಜಾತ್ರೆಯನ್ನು ಮೇ ತಿಂಗಳಲ್ಲಿ ಕೈಗೊಳ್ಳಲು ಇಂದು ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚಿಸಲಾಯಿತು. ಸಮಿತಿಯ ಅಧ್ಯಕ್ಷ ಕೆ. ಮುದುಕಪ್ಪ ಮಾತನಾಡಿ, ಜಾತ್ರೆಯು ಮೇ 12 ರಿಂದ 26ರವರೆಗೆ ನಡೆಯಲಿದ್ದು, ಪ್ರಮುಖವಾಗಿ 18, 19 ಹಾಗೂ 20ರಂದು ಜಾತ್ರೆಯ ಪ್ರಮುಖ ಘಟ್ಟ ತಲುಪುತ್ತದೆ. ಅಂದು ರಥೋತ್ಸವವೂ ಜರುಗಲಿದ್ದು, 12ರಂದು ಉಕ್ಕಡ (ಗಡಿ) ಕಾಯುವುದರೊಂದಿಗೆ ಜಾತ್ರೆಗೆ ಚಾಲನೆ ನೀಡಲಾಗುವುದು ಎಂದರು. ಪುರಸಭೆ ಅಧ್ಯಕ್ಷ ವರದರಾಜ್ ಮೋದಿನ್ ಮತ್ತಿತರರು ಪಾಲ್ಗೊಂಡಿದ್ದರು.

## ಹೊನ್ನಾಳಿ : ಕೊರೊನಾ ವಾರಿಯರ್ ಶಶಿಕಲಾ ಅವರಿಗೆ ಸಿಐಟಿಯು ಸನ್ಮಾನ



ಹೊನ್ನಾಳಿ, ಫೆ.16- ತನ್ನ ಮೇಲೆ ಹಲ್ಲೆ ನಡೆದರೂ ಜೀವದ ಹಂಗು ತೊರೆದು ಕರ್ತವ್ಯ ನಿರ್ವಹಿಸಿದ್ದ ನ್ಯಾಮತಿ ತಾಲ್ಲೂಕು ಬಿದರಹಳ್ಳಿ ಮೇಲಿನ ತಾಂಡದ ಅಂಗನವಾಡಿ ಕಾರ್ಯಕರ್ತೆ ಶಶಿಕಲಾ ಬಾಯಿ ಅವರ ಸೇವೆಯನ್ನು ಪರಿಗಣಿಸಿ, ರಾಷ್ಟ್ರಮಟ್ಟದಲ್ಲಿ ಕೊರೊನಾ ವಾರಿಯರ್ಸ್ ದಿ ರಿಯಲ್ ಹೀರೋ ಪ್ರಶಸ್ತಿ ದೊರೆತಿದ್ದು, ಸಿಐಟಿಯು ವತಿಯಿಂದ ಸನ್ಮಾನಿಸಲಾಯಿತು.

ಪಟ್ಟಣದ ಕಿತ್ತೂರು ರಾಣಿ ಚೆನ್ನಮಮ ಸಮುದಾಯ ಭವನದಲ್ಲಿ ಸಿಐಟಿಯು ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮವನ್ನು ಶಾಸಕ ಎಂ.ಪಿ. ರೇಣುಕಾಚಾರ್ಯ ಉದ್ಘಾಟಿಸಿ, ಶಶಿಕಲಾ ಅವರನ್ನು ಸನ್ಮಾನಿಸಿ ಗೌರವಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ವಿಜಯಕುಮಾರ್ ಮಾತನಾಡಿದರು. ತಾಲ್ಲೂಕು ಸಿಡಿಪಿಓ ಮಹಾಂತಸ್ವಾಮಿ, ತಹಶೀಲ್ದಾರ್ ಬಸವನಗೌಡ ಕೋಟೂರು, ಪ.ಪಂ. ಅಧ್ಯಕ್ಷ ಶ್ರೀಧರ್, ತಾಲ್ಲೂಕ ಪಂ. ಇಒ ಗಂಗಾಧರ ಮೂರ್ತಿ, ಪಂಚಾಯ್ತಿ ಮುಖ್ಯಾಧಿಕಾರಿ ಎಸ್.ಆರ್. ವೀರಭದ್ರಯ್ಯ, ಸಹಾಯಕ ಸಿಡಿಪಿಓ ದೇನ್ಯಾನಾಯ್ಕ, ಅಂಗನವಾಡಿ ಕಾರ್ಯಕರ್ತೆಯರ ತಾಲ್ಲೂಕು ಅಧ್ಯಕ್ಷೆ ಲತಾಬಾಯಿ, ಗೀತಾ ಮತ್ತಿತರರು ಭಾಗವಹಿಸಿದ್ದರು. ಉಷಾದೇವಿ ಪ್ರಾರ್ಥಿಸಿದರು. ರೇಣುಕಾ ಸ್ವಾಗತಿಸಿ, ಗೀತಾ ವಂದಿಸಿದರು.

## ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಸಂಘದ ಪ್ರತಿಭಟನೆಗೆ ಬೆಂಬಲ

ದಾವಣಗೆರೆ, ಫೆ.16- ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ/ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಇದೇ ದಿನಾಂಕ 18 ರಂದು ಹಮ್ಮಿಕೊಂಡಿರುವ ಪ್ರತಿಭಟನೆಗೆ ದಾವಣಗೆರೆ ಮಹಾನಗರ ಪಾಲಿಕೆ ನೌಕರರ ಸಂಘ ಬೆಂಬಲ ನೀಡಿದೆ ಎಂದು ನಗರ ಪಾಲಿಕೆ ನೌಕರರ ಸಂಘದ ಅಧ್ಯಕ್ಷ ಕೆ.ಎಸ್. ಗೋವಿಂದರಾಜ್ ತಿಳಿಸಿದ್ದಾರೆ.

## ಗ್ರಾಮಾಂತರದಲ್ಲಿಂದು ವಿದ್ಯುತ್ ವ್ಯತ್ಯಯ

ದಾವಣಗೆರೆ ತಾಲ್ಲೂಕಿನ ಆವರಗೆರೆ, ಕಾಡಜ್ಜಿ, ಪುಟಗನಾಳು, ಬಸವನಾಳು, ಎಲೆಬೇತೂರು, ಅಣಜಿ, ಕಿತ್ತೂರು, ಸಿದ್ದನೂರು, ಗುಡಾಳು, ಮೆಳ್ಳೆಕಟ್ಟೆ ಹಾಗೂ ಆಲೂರು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಮೋತಿ ವೀರಪ್ಪ ಕಾಲೇಜ್ ಹಿಂಭಾಗ, ಸರ್ ಎಂ.ವಿಶ್ವೇಶ್ವರಯ್ಯ ಪಾರ್ಕ್, ಬ್ಲಡ್ ಬ್ಯಾಂಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ವೀರಶೈವರಿಗೂ ಒಬಿಸಿ ಮೀಸಲಾತಿ ಬೇಕು : ಉಜ್ಜಿನಿ ಶ್ರೀ

**ಪಂಚಮಸಾಲಿ ಹೋರಾಟಕ್ಕೆ ಬೆಂಬಲ**

ಹರಪನಹಳ್ಳಿ, ಫೆ.16- ಪಂಚಮಸಾಲಿ ಲಿಂಗಾಯತರ 2ಎ ಮೀಸಲಾತಿ ಹೋರಾಟಕ್ಕೆ ನಮ್ಮ ಬೆಂಬಲವಿದೆ. ಜೊತೆಗೆ ವೀರಶೈವರಿಗೂ ಒಬಿಸಿ ಮೀಸಲಾತಿ ಬೇಕು ಎಂದು ಪಂಚಪೀಠಗಳಲ್ಲೊಂದಾದ ಉಜ್ಜಯಿನಿ ಪೀಠದ ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ ತಿಳಿಸಿದ್ದಾರೆ.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಶ್ರೀಗಳು, ವೀರಶೈವ ಲಿಂಗಾಯತರಲ್ಲಿ ಪಂಚಮಸಾಲಿ ಶ್ರೇಷ್ಠ ಒಳಪಂಗಡವಿದ್ದು, ಅವರಿಗೆ ಮೀಸಲಾತಿ ಸಿಕ್ಕರೆ ಸಂತೋಷ. ಅವರ ಪಾದಯಾತ್ರೆಗೆ ನಮ್ಮ ಶಾಖಾ ಮಠದ ಸ್ವಾಮೀಜಿಗಳನ್ನು ಕಳುಹಿಸಿಕೊಟ್ಟಿದ್ದೇವೆ ಎಂದರಲ್ಲದೆ, ನಮ್ಮ ಹೋರಾಟ ಪಂಚಮಸಾಲಿಯವರಿಗೆ ಕೌಂಟರ್ ಅಲ್ಲ ಎಂದು ನುಡಿದರು.

ವೀರಶೈವ ಲಿಂಗಾಯತ ಮೀಸಲಾತಿ ಬೇಡಿಕೆ ಇಂದು ನಿನ್ನೆಯದಲ್ಲ. 1915 ರಲ್ಲಿಯೇ ಒಬಿಸಿ ಹೋರಾಟ ಆರಂಭವಾಗಿದೆ. ಕಳೆದ ವರ್ಷ ಕಾಶಿ ಪೀಠದಲ್ಲಿ ಪ್ರಧಾನಿ ಮೋದಿಯವರಿಗೆ ಈ ಕುರಿತು ಮನವಿ ಪತ್ರ ಸಲ್ಲಿಸಲು ಹೋಗಿದ್ದೆವು. ಆದರೆ ನೇರವಾಗಿ ಪ್ರಧಾನಿಯವರಿಗೆ ಕೊಡಬಾರದು ಎಂದು ಯಡಿಯೂರಪ್ಪನವರು ಹೇಳಿದ್ದರಿಂದ ಕೊಟ್ಟಿರಲಿಲ್ಲ. ಈಗ ಮುಖ್ಯಮಂತ್ರಿಗಳಿಗೆ ಮನವಿ ನೀಡಿದ್ದು, ಪರಿಶೀಲಿಸುತ್ತೇವೆ ಎಂದಿದ್ದಾರೆ.

ಫೆ.18-19 ರಂದು ಕೆಲವು ಸ್ವಾಮೀಜಿಗಳನ್ನು ಮತ್ತೆ ಸಿಎಂ ಬಳಿ ಕಳುಹಿಸುತ್ತೇವೆ. ಕಾದು ನೋಡಿ ಮುಂದೆ ಏನು ಮಾಡಬೇಕು ಎಂದು ನಿರ್ಧರಿಸುತ್ತೇವೆ ಎಂದು ಅವರು ಹೇಳಿದರು. ವೀರಶೈವರಿಗೆ ಒಬಿಸಿ ಮೀಸಲಾತಿ ಹೋರಾಟ ಕುರಿತು ಸಭೆ ಮಾಡಿರುವುದರಲ್ಲಿ ಸಿಎಂ ಪುತ್ರ ವಿಜೇಂದ್ರ ಅವರ ಕೈವಾಡ ಇಲ್ಲ. ಅವೆಲ್ಲಾ ಸುಳ್ಳು ವದಂತಿ ಎಂದು ಸ್ಪಷ್ಟ ಪಡಿಸಿದರು.

ಉಜ್ಜಯಿನಿ ಪೀಠದ ಪೀಠಾಧಿಪತಿ ಕುರಿತು ಪ್ರತಿಕ್ರಿಯೆ ನೀಡಲು ನಿರಾಕರಿಸಿದ ಶ್ರೀಗಳು ಆ ವಿಷಯವೆಲ್ಲಾ ಭಕ್ತರು ನೋಡಿಕೊಳ್ಳುತ್ತಾರೆ. ಪಂಚಪೀಠದಲ್ಲಿ ಮೂಡಿರುವ ಒಡಕು ಕುರಿತು ಸಹ ಮಾತನಾಡಲು ಇಚ್ಛಿಸಲಿಲ್ಲ. ಈ ಸಂದರ್ಭದಲ್ಲಿ ತೆಗ್ಗಿನ ಮಠದ ವರಸದ್ಯೋಜಾತ ಸ್ವಾಮೀಜಿ ಉಪಸ್ಥಿತರಿದ್ದರು.

## ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಹರಿಹರದಲ್ಲಿ ಇಂದು ಸಭೆ



ಹರಿಹರದ ಪ್ರೊ.ಬಿ.ಕೃಷ್ಣಪ್ಪ ಸ್ಮಾರಕ ಭವನದಲ್ಲಿ ಮಾದಿಗ ಉಪ ಜಾತಿಗಳ ಮಠಾಧೀಶರ ನೇತೃತ್ವದಲ್ಲಿ, ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಇಂದು ಪಾದಯಾತ್ರೆಯ ಪೂರ್ವ ಭಾವಿ ಸಭೆ ಆಯೋಜನೆ ಮಾಡಲಾಗಿದೆ ಎಂದು ಹಿರಿಯೂರು ಆದಿಜಾಂಬವ ಮಠದ ಶ್ರೀ ಷಡಕ್ಷರಿ ಮುನಿ ಸ್ವಾಮೀಜಿ ತಿಳಿಸಿದ್ದಾರೆ.

ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಸರ್ಕಾರದ ಗಮನ ಸೆಳೆದು ಹಕ್ಕೊತ್ತಾಯಕ್ಕೆ ಒಂದು ತಾರ್ಕಿಕ ಅಂತ್ಯ ಕಾಣಲು ಮಾದಿಗ ಮತ್ತು ಮಾದಿಗ ಉಪ ಜಾತಿಗಳ ಆದಿಜಾಂಬವ ಮಠದ ಶ್ರೀ ಷಡಕ್ಷರಿ ಮುನಿ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠದ ಶ್ರೀ ಚನ್ನಯ್ಯ ಸ್ವಾಮೀಜಿ ಸೇರಿ ಹಲವು ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಹರಿಹರ ಬೈಪಾಸ್ ಬಳಿ ಇರುವ ಪ್ರೊ. ಬಿ. ಕೃಷ್ಣಪ್ಪ ಸ್ಮಾರಕ ಭವನದಲ್ಲಿ ಮಾದಿಗ ಉಪ ಜಾತಿಗಳ ಮಠಾಧೀಶರ ನೇತೃತ್ವದಲ್ಲಿ, ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಪಾದಯಾತ್ರೆಯ ಪೂರ್ವಭಾವಿ ಸಭೆಯನ್ನು ಆಯೋಜಿಸಲಾಗಿದೆ.

ಒಳಮೀಸಲಾತಿ ಜಾರಿಗೆ ಪಾದಯಾತ್ರೆಯನ್ನು ಮಾರ್ಚ್ 25 ರಂದು ಹಮ್ಮಿಕೊಂಡಿದ್ದು, ಪಾದಯಾತ್ರೆಯ ರೂಪುರೇಷೆಗಳ ತಯಾರಿಗಾಗಿ ಈ ಸಭೆ ಏರ್ಪಾಡಾಗಿದೆ.

## ಎಲ್ಲಾ ಗ್ರಾ.ಪಂ.ಗಳಲ್ಲೂ ಸೌರಶಕ್ತಿ ಅಳವಡಿಕೆ : ಸಚಿವ ಈಶ್ವರಪ್ಪ

(1ನೇ ಪುಟದಿಂದ) ನೀಡುತ್ತಾರೆ, ಪ್ರತಿ ತಂಡದಲ್ಲಿ 40 ಮಂದಿಗೆ ಸದಸ್ಯರ ಅಧಿಕಾರ, ಯೋಜನೆಗಳ ಅನುಷ್ಠಾನದ ಬಗ್ಗೆ ತರಬೇತಿ ನೀಡಲಾಗುತ್ತದೆ.

ಗ್ರಾಮ ಪಂಚಾಯತ್ ಸದಸ್ಯರಿಗೆ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಂಸ್ಥೆ ಮೂಲಕ ತರಬೇತಿ ನೀಡಲಾಗುತ್ತಿದ್ದು, ಮೊದಲ ಹಂತದಲ್ಲಿ 11,500 ಮಂದಿಗೆ ತರಬೇತಿ ನೀಡಲಾಗುವುದು.

ತರಬೇತಿಗೆ 23 ಕೋಟಿ ರೂ. ವೆಚ್ಚವಾಗಲಿದೆ, ಗ್ರಾಮ ಪಂಚಾಯತ್ ಸದಸ್ಯರ ತರಬೇತಿ ನಂತರ ಗ್ರಾಮ ಪಂಚಾಯತ್ ಅಧ್ಯಕ-ಉಪಾಧ್ಯಕ್ಷರಿಗೂ ತರಬೇತಿ ನೀಡಲಾಗುವುದು ಎಂದು ಈಶ್ವರಪ್ಪ ಹೇಳಿದ್ದಾರೆ.

ಘನತ್ಯಾಜ್ಯ ವಿಲೇವಾರಿಗೆ ಹಣ ಒದಗಿಸಲಾಗುವುದು, ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಸೌರಶಕ್ತಿ ವ್ಯವಸ್ಥೆ ಅಳವಡಿಕೆಗೆ ನಿರ್ಧರಿಸಲಾಗಿದ್ದು, ಇದರಿಂದ ವಿದ್ಯುತ್ ಸಮಸ್ಯೆ ಪರಿಹಾರವಾಗಲಿದೆ ಎಂದವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಹೆಚ್ಚುವರಿ ವಿದ್ಯುತ್ ಅನ್ನು ವಿದ್ಯುತ್ ಜಾಲಕ್ಕೆ ಮಾರಾಟ ಮಾಡುವ ಮೂಲಕ ಆದಾಯ ಹೆಚ್ಚಿಸಿಕೊಳ್ಳಲು ಅವಕಾಶವಿದೆ ಎಂದರು.

ಗ್ರಾಮಕ್ಕೆ ಸಂಬಂಧಿಸಿದ ಎಲ್ಲಾ ಕೆಲಸಗಳನ್ನು ಗ್ರಾಮ ಪಂಚಾಯತ್‌ಗಳೇ ಮಾಡಬೇಕಿದೆ, ಗ್ರಾಮದಿಂದ ರಾಷ್ಟ್ರದ ಅಭಿವೃದ್ಧಿ ಆಗಬೇಕಿದೆ, ಗ್ರಾಮ ಪಂಚಾಯತ್ ಸದಸ್ಯರು ತಮ್ಮ ಮನೆ ಅಭಿವೃದ್ಧಿಯೆಂದು ಭಾವಿಸಿ ಕೆಲಸ ನಿರ್ವಹಿಸುವಂತೆ ಸಚಿವರು ಸಲಹೆ ಮಾಡಿದರು.

ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಶೇ.50ರಷ್ಟು ಮಹಿಳಾ ಸದಸ್ಯರು ಆಯ್ಕೆಯಾಗಿದ್ದು, ಇವರುಗಳು ತಮ್ಮ ಮನೆಯಂತೆ ಗ್ರಾಮ ಪಂಚಾಯತ್ ಆಡಳಿತ ನಿರ್ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ವರ್ಷಾಚರಣೆ ಅಂಗವಾಗಿ 'ಜನರ ಯೋಜನೆ' ಎಂಬ ಹೆಸರಿನ ಕಾರ್ಯಕ್ರಮ ಜಾರಿಗೆ ತರಲಾಗುವುದು. ಜ್ಞಾನಾರ್ಜನೆಗಾಗಿ 'ಓದುವ ಬೆಳಕು' ಕಾರ್ಯಕ್ರಮ ಹಾಗೂ ಮಾಹಿತಿ ಕೇಂದ್ರಗಳನ್ನು ತೆರೆಯಲಾಗುವುದು ಎಂದೂ ಈಶ್ವರಪ್ಪ ತಿಳಿಸಿದ್ದಾರೆ.

## ರಾಣೇಬೆನ್ನೂರು : ದೇವಾಂಗ ಅಭಿವೃದ್ಧಿ ನಿಗಮ ಸ್ಥಾಪನೆಗೆ ಮನವಿ



ರಾಣೇಬೆನ್ನೂರು, ಫೆ.16- ದೇವ ಮಾನವರಿಗೆ ಬಟ್ಟೆ ನೇಯ್ದು ಕೊಟ್ಟ ದೇವಾಂಗ ಜನರ ಬದುಕು ದುಸ್ತರವಾಗಿದ್ದು, ದೇವಾಂಗ ಅಭಿವೃದ್ಧಿ ನಿಗಮ ಸ್ಥಾಪಿಸಿ, ಸಮಾಜದ ಅಭಿವೃದ್ಧಿಗೆ ಅವಕಾಶ ಕಲ್ಪಿಸುವಂತೆ ಒತ್ತಾಯಿಸಿ ತಾಲ್ಲೂಕಿನ ತುಮ್ಮಿನಕಟ್ಟೆ ದೇವಾಂಗ ಸಮಾಜದವರು ತಹಶೀಲ್ದಾರರಿಗೆ ಮನವಿ ಸಲ್ಲಿಸಿದ್ದಾರೆ.

2ಎ ಮೀಸಲಾತಿಯಿಂದ ಯಾವ ಪ್ರಯೋಜನವೂ ಆಗುತ್ತಿಲ್ಲ. ಕಾರಣ ದೇವಾಂಗ ಅಭಿವೃದ್ಧಿ ನಿಗಮ ಸ್ಥಾಪಿಸಿ ಅವರಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯವಾಗಿ ಬೆಳೆಯಲು ಅವಕಾಶ ಕಲ್ಪಿಸುವಂತೆ ಕೋರಿ ನಗರದ ಕೆಇಬಿ ಗಣೇಶ ಗುಡಿಯಿಂದ ತಹಶೀಲ್ದಾರರ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ರಮೇಶ ಗಂಜಾಮದ, ಸತ್ಯನಾರಾಯಣ ದುರಗೆರೆ, ಗೌರಮ್ಮ ಗಂಜಾಮದ, ಸತ್ಯಪ್ಪ ಮತ್ತಿತರರು ಹಾಜರಿದ್ದರು.

ರಾಣೇಬೆನ್ನೂರು ದೇವಾಂಗ ಸಮಾಜದ ಸಭೆ ಇತ್ತೀಚೆಗೆ ನಡೆಯಿತು. ಸಭೆಯಲ್ಲಿ ನೇಕಾರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು ಎನ್ನುವ ನಿರ್ಣಯವನ್ನು ಸಭೆ ಕೈಗೊಂಡಿದೆ ಎಂದು ತಿಳಿದುಬಂದಿದೆ.

## ಪುರಸಭೆ ಸದಸ್ಯರಿಗೆ ನೋಟಿಸ್ ಜಾರಿ ಮಾಡಿದ ಜಿಲ್ಲಾಧಿಕಾರಿ

ಮಲೇಬೆನ್ನೂರು, ಫೆ. 16 – ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ನಿಯಮ 17ನ್ನು ಉಲ್ಲಂಘಿಸಿ ಮ್ಯಾನುಯಲ್ ಟೆಂಡರ್ ಕರೆಯಲು ಪುರಸಭೆ ಮುಖ್ಯಾಧಿಕಾರಿ ಮತ್ತು ಕಿರಿಯ ಅಭಿಯಂತರರಿಗೆ ತಾವೇ ಒತ್ತಾಯಿಸಿರುವುದಾಗಿ ಮನವಿಯಲ್ಲಿ ಒಪ್ಪಿಕೊಂಡಿರುವಂತೆ, ನಿಮ್ಮ ಸದಸ್ಯತ್ವವನ್ನು ದುರುಪಯೋಗ ಪಡಿಸಿಕೊಂಡಿರುವ ಕುರಿತು ನಿಮ್ಮ ಸದಸ್ಯತ್ವವನ್ನು ಏಕೆ ರದ್ದುಗೊಳಿಸಬಾರದು ಎಂಬುದಕ್ಕೆ ನಿಮ್ಮ ಸೂಕ್ತ ಸಮಜಾಯಿಷಿಯನ್ನು ನೋಟಿಸ್ ತಲುಪಿದ 24 ಘಂಟೆ ಯೊಳಗಾಗಿ ಖುದ್ದು ಹಾಜರಾಗಿ ನೀಡುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಮಂಗಳವಾರ ಮಲೇಬೆನ್ನೂರು ಪುರಸಭೆ ಸದಸ್ಯರಿಗೆ ನೋಟಿಸ್ ಜಾರಿ ಮಾಡಿದ್ದಾರೆ.

## 20ರಿಂದ 'ಹಳ್ಳಿ ಕಡೆಗೆ ನಮ್ಮ ನಡಿಗೆ'

(1ನೇ ಪುಟದಿಂದ) ಪರಿಹಾರ ಕಲ್ಪಿಸಬೇಕು ಎಂದು ತಿಳಿಸಿದ್ದಾರೆ.

ನಾನೂ ಕೂಡ ಅಂದು ದೊಡ್ಡಬಳ್ಳಾಪುರದ ಕುಗ್ರಾಮಕ್ಕೆ ತೆರಳಿ ಅಲ್ಲಿಯೇ ವಾಸ್ತವ್ಯ ಮಾಡಿ ಜನರ ಸಮಸ್ಯೆಗಳನ್ನು ಆಲಿಸಿ, ಪರಿಹಾರ ಕ್ರಮ ಕೈಗೊಳ್ಳುತ್ತೇನೆ ಎಂದವರು ಹೇಳಿದ್ದಾರೆ.

ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರರು ತಿಂಗಳಲ್ಲಿ ಮೂರು ದಿನ ಗ್ರಾಮ ವಾಸ್ತವ್ಯ ಮಾಡಬೇಕು, ಯಾವ ಗ್ರಾಮದಲ್ಲಿ ಅವರು ವಾಸ್ತವ್ಯ ಇರುತ್ತಾರೋ, ಆ ಗ್ರಾಮದ ಸುತ್ತಲಿನ ಹಳ್ಳಿಗಳ ಜೊತೆ ಸಂವಾದ ನಡೆಸಬೇಕು.

ಈ ಸಂದರ್ಭದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು, ಜೊತೆಗೆ ಅಧಿಕಾರಿಗಳು ವಾಸ್ತವ್ಯ ಹೂಡುವ ಸುತ್ತಮುತ್ತಲಿನ ಗ್ರಾಮೀಣ ರಸ್ತೆಗಳನ್ನು ಪರಿಶೀಲಿಸಬೇಕು ಎಂದು ಅಶೋಕ್ ಹೇಳಿದ್ದಾರೆ.

ಅಧಿಕಾರಿಗಳ ಭೇಟಿ ಸಂದರ್ಭದಲ್ಲಿ ಆರೋಗ್ಯ ಶಿಬಿರಗಳನ್ನು ನಡೆಸುವುದು ಕಡ್ಡಾಯವಾಗಿದ್ದು, ಆ ಭಾಗದಲ್ಲಿ ಕಂದಾಯ ಭೂಮಿ ಇದ್ದರೆ ಅರಣ್ಯ ಇಲಾಖೆ ಸಹಕಾರದಿಂದ ಗಿಡ-ಮರಗಳನ್ನು ನೆಡಿಸಬೇಕು.

ಪ್ರವಾಹ ಸಮಯದಲ್ಲಿ ಮನೆ ಕಳೆದುಕೊಂಡವರನ್ನು ಗುರುತಿಸಬೇಕು, ಮತದಾರರ ಪಟ್ಟಿ ಪರಿಶೀಲನೆ, ಗ್ರಾಮದ ಕಾಲು ದಾರಿ ಮುಚ್ಚಿ ಹೋಗಿದ್ದರೆ ಪರಿಶೀಲಿಸಬೇಕು, ಹಳ್ಳಿಗಳ ಒಳ ರಸ್ತೆಗಳಲ್ಲಿ ಅಧಿಕಾರಿಗಳು ಓಡಾಡುವಂತೆ ಸೂಚಿಸಲಾಗಿದೆ ಎಂದರು.

ಸಂಜೆ 4ರಿಂದ ಐವರು ಜನ ಪ್ರತಿನಿಧಿಗಳ ಜೊತೆ ಸಭೆ ಮಾಡಬೇಕು, ಭೇಟಿ ಸಂದರ್ಭದಲ್ಲಿ ಹಾರ ತುರಾಯಿಗೆ ಅವಕಾಶ ನೀಡಬಾರದು, ಬದಲಾಗಿ ಕನ್ನಡ ಪುಸ್ತಕಗಳನ್ನು ನೀಡುವಂತೆ ಆದೇಶಿಸಲಾಗಿದೆ ಎಂದವರು ಹೇಳಿದ್ದಾರೆ.


ಅರ್ಹ ಫಲಾನುಭವಿಗಳ ಮನೆ-ಮನೆಗೆ ಮಾಸಾಶನ ತಲುಪಲಿದೆ, ಅಲ್ಲದೆ, ನೇರವಾಗಿ ಅವರ ಖಾತೆಗೆ ಹಣ ಸಂದಾಯವಾಗಲಿದೆ, ಯಾವುದೇ ಪಿಂಚಣಿದಾರ 9 ತಿಂಗಳವರೆಗೆ ಹಣ ತೆಗೆದುಕೊಳ್ಳದಿದ್ದರೆ ಅಂತಹವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದ್ದಾರೆ.

## ಧರಣೇಂದ್ರಕುಮಾರ್ ಕುಮಾರ್ ಕುಷ್ಟಗಿ ಪುರಸಭೆಗೆ ನೇಮಕ

ಮಲೇಬೆನ್ನೂರು, ಫೆ. 16 – ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಂದ ಅಮಾನತ್ತುಗೊಂಡಿದ್ದ ಇಲ್ಲಿನ ಪುರಸಭೆ ಮುಖ್ಯಾಧಿಕಾರಿ ಡಿ.ಎನ್.ಧರಣೇಂದ್ರಕುಮಾರ್ ಅವರನ್ನು ಕುಷ್ಟಗಿ ಪುರಸಭೆಯಲ್ಲಿ ಖಾಲಿಯಿರುವ ಸಮುದಾಯ ಸಂಘಟನಾಧಿಕಾರಿ ಹುದ್ದೆಗೆ ಮಂಗಳವಾರ ನೇಮಕ ಮಾಡಲಾಗಿದೆ.

ದಾವಣಗೆರೆ ಜಿಲ್ಲಾಧಿಕಾರಿಗಳ ಅಮಾನತ್ತು ಆದೇಶವನ್ನು ರದ್ದು ಪಡಿಸಿರುವ ಪೌರಾಡಳಿತ ನಿರ್ದೇಶನಾಲಯಾದ ನಿರ್ದೇಶಕರಾದ ಬಿ.ವಿ. ಕಾವೇರಿ ಜಿಲ್ಲಾಧಿಕಾರಿಗಳು ಪ್ರಸ್ತಾಪಿಸಿರುವ ಕರ್ತವ್ಯ ಲೋಪಗಳ ಆಪಾದನೆಯ ಕುರಿತಂತೆ ತಕ್ಷಣದಿಂದ ಜಾರಿಗೆ ಬರುವಂತೆ ವಿಚಾರಣೆ ಕಾಯ್ದಿರಿಸಿ, ಸೇವೆಯಿಂದ ಅಮಾನತ್ತುಗೊಳಿಸಿ, ಹುದ್ದೆಯ ಲೀವ್ ಅನ್ನು ಕುಷ್ಟಗಿ ಪುರಸಭೆಯಲ್ಲಿ ಖಾಲಿ ಇರುವ ಧರಣೇಂದ್ರಕುಮಾರ್ ಅವರ ಮೂಲ ಹುದ್ದೆಯಾದ ಸಮುದಾಯ ಸಂಘಟನಾಧಿಕಾರಿ ಹುದ್ದೆಗೆ ಬದಲಾಯಿಸಿದೆ.


**ಎಸ್.ಪಿ. ಕೊಟ್ರಗೌಡ್ರು ನಿಧನ**



ಸತ್ತೂರು ಗ್ರಾಮ, ಹರಪನಹಳ್ಳಿ ತಾ|| ಬಳ್ಳಾರಿ ಜಿಲ್ಲೆ ವಾಸಿಯಾದ

**ಎಸ್.ಪಿ. ಕೊಟ್ರಗೌಡ್ರು**


(76) ಇವರು ದಿನಾಂಕ : 16.02.2021ರ ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ನಿಧನರಾಗಿರುತ್ತಾರೆ. ಪತ್ನಿ, 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಇವರ ಅಂತ್ಯಕ್ರಿಯೆಯನ್ನು

ದಿನಾಂಕ : 17.02.2021 ರ ಬುಧವಾರ ಬೆಳಿಗ್ಗೆ 11.00 ಗಂಟೆಗೆ ಮೃತರ ಸ್ವಗ್ರಾಮ ಸತ್ತೂರಿನ ಸ್ವಂತ ಜಮೀನಿನಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತ ಕುಟುಂಬ ವರ್ಗದವರು ಹಾಗೂ ಗೌಡ್ರು ವಂಶಸ್ಥರು, ಸತ್ತೂರು., ಫೋ. : 82175 44597**



**ಚಿರಸ್ಮರಣೆ**



**ದಿ|| ಕೆ.ರಾಮಚಂದ್ರರಾವ್**

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷಗಳಾದವು. ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ನಿಮ್ಮ ಮಾರ್ಗದರ್ಶನದಲ್ಲೇ ನಡೆಯುತ್ತಿರುವ...

**ಪತ್ನಿ : ಶ್ರೀಮತಿ ಸುಶೀಲಮ್ಮ ಪುತ್ರ, 6 ಜನ ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಗಂಡಗಾಳೆ ಬಂಧುಗಳು, ಹುಲಗಿ ಸ್ಟುಡಿಯೋ ಮತ್ತು ಹುಲಗಿ ಎಂಟರ್ ಪ್ರೈಸಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.**


## ಹರಿಹರ ತಾ.ಗೆ ಇಂದು ಎಸಿಬಿ ಭೇಟಿ

ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಅಧಿಕಾರಿಗಳು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 2 ಗಂಟೆವರೆಗೆ ಹರಿಹರ ತಾಲ್ಲೂಕಿನ ಪ್ರವಾಸಿ ಮಂದಿರಕ್ಕೆ ಭೇಟಿ ನೀಡಿ, ಸರ್ಕಾರಿ ಕಚೇರಿಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಕುಂದು - ಕೊರತೆಗಳ ಅರ್ಜಿಗಳನ್ನು ಸ್ವೀಕರಿಸುವರು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08192-236600, 9480806283 ನ್ನು ಸಂಪರ್ಕಿಸಬಹುದೆಂದು ಎಸಿಬಿ ಡಿವೈಎಸ್‌ಪಿ (ಪ್ರಭಾರ) ಜೆ.ಲೋಕೇಶ್ ತಿಳಿಸಿದ್ದಾರೆ.

## ಕೂಡ್ಲಿಗಿ ಬಳಿಯ ರಸ್ತೆ ಅಪಘಾತದಲ್ಲಿ ಯುವಕನ ಸಾವು

ಕೂಡ್ಲಿಗಿ,ಫೆ. 16- ಕೆರೆಕಾವಲರಹಟ್ಟಿ ಗ್ರಾಮದ ಯುವಕನೋರ್ವ ವಾಹನ ಹರಿದು ಮೃತಪಟ್ಟಿರುವ ಘಟನೆ ಇಂದು ಬೆಳಗಿನ ಜಾವ ಜರುಗಿದೆ. ಕೆ.ಕೆ. ಹಟ್ಟಿ ಮಾರೇಶ (18) ಮೃತ ದುರ್ದೈವಿಯಾಗಿದ್ದಾನೆ. ಈತನು ತನ್ನ ಗ್ರಾಮದಿಂದ ಎಂದಿನಂತೆ ಕೂಡ್ಲಿಗಿ ಪಟ್ಟಣಕ್ಕೆ ನಂದಿನಿ ಹಾಲು ತರಲು ಬೈಕ್‌ನಲ್ಲಿ ತೆರಳಿದಾಗ ಮಾರ್ಗ ಮಧ್ಯ ಅಪರಿಚಿತ ವಾಹನ ಹಾಗು ಬೈಕ್ ನಡುವೆ ಡಿಕ್ಕಿಯಾದ ಪರಿಣಾಮ ಈ ಅಪಘಾತ ನಡೆದಿದೆ.

## ಹೊನ್ನಾಳಿ : ಪುಲ್ವಾಮಾ ಹುತಾತ್ಮರಿಗೆ ಶ್ರದ್ಧಾಂಜಲಿ



ಹೊನ್ನಾಳಿ, ಫೆ. 16- ಜಮ್ಮು ಕಾಶ್ಮೀರದಲ್ಲಿ ನಡೆದ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರ ಸ್ಮರಣಾರ್ಥ ಇಲ್ಲಿನ ಟೌನ್‌ಹಾಲ್‌ನಲ್ಲಿ ನಡೆದ ಶ್ರದ್ಧಾಂಜಲಿ ಹಾಗೂ ನಮನ ಸಲ್ಲಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಹೊನ್ನಾಳಿ ಮತ್ತು ನ್ಯಾಮತಿ ತಾಲ್ಲೂಕಿನ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ, ನಿವೃತ್ತ ಸೇನಾಧಿಕಾರಿ ಎಂ. ವಾಸಪ್ಪ, ಮಾಲತೇಶ್ ಶಿವಮೊಗ್ಗ, ಎಂ. ಬಾಬು ಅವರು ಉಪಸ್ಥಿತರಿದ್ದು, ಪುಲ್ವಾಮಾ ದಾಳಿಯಲ್ಲಿ ಮಡಿದ ಸಿಆರ್‌ಪಿಎಫ್‌ನ ವೀರ ಯೋಧ ಬಗ್ಗೆ ಮಾತನಾಡಿದರು. ನಂತರ ಮೌನಾಚರಣೆ ಮಾಡಿ ಕ್ಯಾಂಡಲ್ ಲೈಟ್ ಮೂಲಕ ಶ್ರದ್ಧಾಂಜಲಿ ಸಲ್ಲಿಸಲಾಯಿತು.

# ದೆಹಲಿ : ಪ್ರತಿಭಟನಾ ಸ್ಥಳಗಳಲ್ಲಿ ಕರಗುತ್ತಿರುವ ಜನಸಂದಣಿ

ನವದೆಹಲಿ, ಫೆ. 16 – ಕೇಂದ್ರ ಸರ್ಕಾರ ಜಾರಿಗೆ ತಂದ ಮೂರು ಕೃಷಿ ಕಾಯ್ದೆಗಳ ವಿರುದ್ಧ ರೈತರು ನಡೆಸುತ್ತಿರುವ ಪ್ರತಿಭಟನೆ ಮೂರು ತಿಂಗಳಿಗೆ ಸಮೀಪಿಸುತ್ತಿರುವಂತೆಯೇ ದೆಹಲಿಯ ಪ್ರಮುಖ ಪ್ರತಿಭಟನಾ ಸ್ಥಳಗಳಾದ ಸಿಂಘು, ಟಿಕ್ರಿ ಹಾಗೂ ಘಾಜಿಪುರಗಳಲ್ಲಿ ಪ್ರತಿಭಟನಾಕಾರರ ಸಂಖ್ಯೆ ವಿರಳವಾಗುತ್ತಿದೆ. ಆದರೆ, ಪ್ರತಿಭಟನೆ ಹಿಂದಿನಂತೆಯೇ ಬಲಿಷ್ಠವಾಗಿದೆ ಎಂದು ರೈತ ಮುಖಂಡರು ಸಮರ್ಥಿಸಿಕೊಂಡಿದ್ದಾರೆ.

ದೆಹಲಿಯ ಗಡಿಯಲ್ಲಿ ಸ್ಥಾಪಿಸಲಾಗಿರುವ ಸಾಮೂಹಿಕ ಭೋಜನ ತಾಣಗಳು ಹಾಗೂ ಟೆಂಟ್‌ಗಳು ಖಾಲಿಯಾಗುತ್ತಿವೆ. ಸಂಘಟನೆಗಾಗಿ ಪ್ರತಿಭಟನಾ ನಿರತರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುತ್ತಿದ್ದಾರೆ ಎಂದು ರೈತ ಮುಖಂಡರು ಹೇಳಿದ್ದಾರೆ.

ಜನರ ಗುಂಪು ಕರಗುತ್ತಿಲ್ಲ. ನಾವು ಹೋರಾಟವನ್ನು ಹರಡುತ್ತಿದ್ದೇವೆ. ಕೇವಲ ಪಂಜಾಬ್ ಹಾಗೂ ಹರಿಯಾಣ ಅಷ್ಟೇ ಅಲ್ಲದೇ ಬೇರೆ ಗ್ರಾಮಗಳು ಹಾಗೂ ಜಿಲ್ಲೆಗಳಿಂದ ಜನರನ್ನು ಕರೆ ತರುತ್ತಿದ್ದೇವೆ ಎಂದು ಮುಖಂಡರು ತಿಳಿಸಿದ್ದಾರೆ.

ಪಂಜಾಬ್‌ನಲ್ಲಿ ಅಲೆ ಸೃಷ್ಟಿಸಲು ಕೆಲ ತಿಂಗಳುಗಳು ಬೇಕಾದವು. ಇದೇ ರೀತಿಯ ಅಲೆಯನ್ನು ಇಡೀ ದೇಶದಲ್ಲಿ ಮೂಡಿಸಲು ಸ್ವಲ್ಪ ಸಮಯ ಬೇಕಾಗುತ್ತದೆ. ಆದರೆ, ನಮ್ಮ ಹೋರಾಟ ಬಿರುಸು ಕಳೆದುಕೊಂಡಿಲ್ಲ. ಇದರ ಬದಲು ದಿನದಿಂದ ದಿನಕ್ಕೆ ಪ್ರತಿಭಟನೆ ಬಲಿಷ್ಠವಾಗುತ್ತಿದೆ ಎಂದು ಕ್ರಾಂತಿಕಾರಿ ಕಿಸಾನ್ ಯೂನಿಯನ್ (ಪಂಜಾಬ್) ಮುಖಂಡ ಅವತಾರ್ ಸಿಂಗ್ ಹೇಳಿದ್ದಾರೆ.

ಸಾಕಷ್ಟು ರೈತರು ಗಡಿಗಳಿಂದ ತಮ್ಮ ಮನೆಗಳಿಗೆ ಹೋಗಿ ಬರುತ್ತಿದ್ದಾರೆ. ಅವರು ಹೊಲಗಳನ್ನೂ ನೋಡಿಕೊಳ್ಳುತ್ತಿದ್ದಾರೆ. ಆದರೆ, ಗಡಿಗಳಲ್ಲಿನ ಪ್ರತಿಭಟನಾ ಸ್ಥಳಗಳಲ್ಲಿ ಜನಸಂಖ್ಯೆ ಎಂದಿನಂತೆಯೇ ಇದೆ. ಫೆಬ್ರವರಿ 18ರಂದು ದೇಶಾದ್ಯಂತ ರೈಲು ತಡೆಗೆ ಕರೆ ನೀಡಲಾಗಿದ್ದು, ಅಂದು ಇನ್ನಷ್ಟು ಜನರು ಬರಲಿದ್ದಾರೆ ಎಂದವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಂಯುಕ್ತ ಕಿಸಾನ್ ಮೋರ್ಚಾ ಗಡಿಗಳಲ್ಲಿ ಜನರ ಸಂಖ್ಯೆ ಸ್ಥಿರವಾಗಿರುವಂತೆ ನೋಡಿಕೊಳ್ಳುತ್ತಿದೆ. ಪ್ರತಿಭಟನಾಕಾರರು ತಮ್ಮ ಮನೆಗಳನ್ನು ನಿರ್ವಹಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಫೆಬ್ರವರಿ 18ರ ನಂತರವೇ ಪ್ರತಿಭಟನಾ ನಿರತರ ಸಂಖ್ಯೆ ಹೆಚ್ಚಾಗಲಿದೆ. ಶೀಘ್ರದಲ್ಲೇ ದೇಶಾದ್ಯಂತ ಇರುವ ಜನರು ದೆಹಲಿಗೆ ಕಾಲ್ನಡಿಗೆಯಲ್ಲಿ ಬರುವಂತೆ ಕರೆ ನೀಡಲಾಗುವುದು ಎಂದು ಅವತಾರ್ ಸಿಂಗ್ ತಿಳಿಸಿದ್ದಾರೆ.

ಹರಿಯಾಣ, ಮಹಾರಾಷ್ಟ್ರ ಹಾಗೂ ರಾಜಸ್ಥಾನಗಳಲ್ಲಿಮಹಾಪಂಚಾಯತ್‌ಗಳನ್ನು ಆಯೋಜಿಸಲಾಗಿದೆ. ಅದೂ ಸಹ ಸಿಂಘು, ಟಿಕ್ರಿ ಹಾಗೂ ಘಾಜಿಪುರ ಗಡಿಗಳಲ್ಲಿ ಜನರು ಕಡಿಮೆಯಾಗಲು ಕಾರಣವಾಗಿದೆ. ಪಂಚಾಯತ್‌ಗಳಲ್ಲಿ ಸಂಘಟನೆಗಾಗಿ ಇಲ್ಲಿನವರು ಹೋಗಿದ್ದಾರೆ. ಅವರು ಮತ್ತೆ ವಾಪಸ್ ಬರಲಿದ್ದಾರೆ ಎಂದು ಭಾರತೀಯ ಕಿಸಾನ್ ಯೂನಿಯನ್ ಏಕ್ತಾ (ಡಕೌಡಾ) ಪ್ರಧಾನ ಕಾರ್ಯದರ್ಶಿ ಜಗಮೋಹನ್ ಸಿಂಗ್ ತಿಳಿಸಿದ್ದಾರೆ.

ಪ್ರತಿ ಹಳ್ಳಿಯಿಂದ ಜನರು ಸರದಿಯಲ್ಲಿ ದೆಹಲಿಗೆ ಬರುತ್ತಿದ್ದಾರೆ. ಕಾಯ್ದೆಗಳ ಕುರಿತು ಸರ್ಕಾರದ ಜೊತೆ ಮಾತುಕತೆ ಪ್ರಗತಿಯಾಗುತ್ತಿಲ್ಲ. ಹೀಗಾಗಿ ರೈತರು ಬೇಸಿಗೆಯಲ್ಲೂ ಪ್ರತಿಭಟನೆ ನಡೆಸಲಿದ್ದಾರೆ ಎಂದು ಬಿಕೆಯು (ಲಖೊವಲ್) ಪ್ರಧಾನ ಕಾರ್ಯದರ್ಶಿ ಪರಮ್‌ಜಿತ್ ಸಿಂಗ್ ಹೇಳಿದ್ದಾರೆ.

ನಾವು ಬಿಸಿಲು ಸಹಿಸಲಾಗದೇ ವಾಪಸ್ ಹೋಗುತ್ತೇವೆ ಎಂದು ಸರ್ಕಾರ ಭಾವಿಸಿದೆ. ಆದರೆ, ಹಲವಾರು ಸಂಘಟನೆಗಳು ಹಾಗೂ ಅನಿವಾಸಿ ಭಾರತೀಯ ಸ್ನೇಹಿತರು ನೆರವು ನೀಡುತ್ತಿದ್ದಾರೆ. ನಾವು ಟೆಂಟ್ ಹಾಗೂ ಕೂಲರ್ ಅಳವಡಿಸಿಕೊಂಡು ಬಿಸಿಲು ಎದುರಿಸುತ್ತೇವೆ ಎಂದು ಸಿಂಗ್ ತಿಳಿಸಿದ್ದಾರೆ.

# ಅರಿವಿನ ಕಾರಣ ಮಾನವ ಎಲ್ಲ ಜೀವಿಗಳಿಗಿಂತ ಶ್ರೇಷ್ಠ

## ರಾಣೇಬೆನ್ನೂರಿನ ಕಾರ್ಯಕ್ರಮದಲ್ಲಿ ಹಂಪಿ ಹೇಮಕೂಟ ಸಿದ್ಧಾರೂಢ ಮಠದ ಶ್ರೀ ವಿದ್ಯಾನಂದ ಭಾರತಿ ಸ್ವಾಮೀಜಿ

ರಾಣೇಬೆನ್ನೂರು, ಫೆ.16- ಈ ಭೂಮಿಯ ಮೇಲೆ ಜನ್ಮವೆತ್ತಿದ ಪ್ರತಿಯೊಂದು ಪ್ರಾಣಿಗಳಿಗಿಂತ ಮನುಜ ಜೀವಿಯು ಬಹು ಭಿನ್ನವಾಗಿದ್ದಾನೆ. 84 ಲಕ್ಷ ಜೀವರಾಶಿಗಳಲ್ಲಿ ಮಾನವನಿಗೆ ಅರಿವಿದೆ. ಪ್ರಾಣಿಗಳಿಗೆ ಅರಿವಿಲ್ಲ. ಹಾಗಾಗಿ ಮನುಷ್ಯ ಶ್ರೇಷ್ಠನಾಗಿದ್ದಾನೆ ಎಂದು ಹಂಪಿ ಹೇಮಕೂಟ ಸಿದ್ಧಾರೂಢ ಮಠದ ಶ್ರೀ ವಿದ್ಯಾನಂದ ಭಾರತಿ ಸ್ವಾಮೀಜಿ ಹೇಳಿದರು.



ಇಲ್ಲಿನ ಸಿದ್ಧಾರೂಢ ಮಠದಲ್ಲಿ ಶ್ರೀ ಸಿದ್ಧಾರೂಢ ಸ್ವಾಮಿಗಳವರ ಮಹಾರಥೋತ್ಸವದ ಅಂಗವಾಗಿ ಏರ್ಪಡಿಸಿದ್ದ 21ನೇ ವರ್ಷದ ಎರಡನೇ ದಿನದ ವೇದಾಂತ ಪರಿಷತ್ ಧರ್ಮ ಸಮಾರಂಭದ ಸಾನ್ನಿಧ್ಯ ವಹಿಸಿ, ಶ್ರೀಗಳು ಆಶೀರ್ವಚನ ನೀಡಿದರು.

ಎಲ್ಲ ಜೀವಿಗಳಲ್ಲೂ ನಿದ್ರೆ, ಊಟ, ನೀರಡಿಕೆ, ಸಂಸಾರ ಪ್ರಾಪ್ತಿ, ಆಯಾಸ, ಹಸಿವು, ನೋವು ಇದ್ದೇ ಇದೆ. ಆದರೆ ಜ್ಞಾನ ಮತ್ತು ವಿಚಾರಿಸುವ ಏಕೈಕ ಶಕ್ತಿ ಮನುಜನಿಗೆ ಇರುವ ಕಾರಣಗಳಿಂದಲೇ ಮಾನವ ಜೀವಿ ವಿಭಿನ್ನವಾಗಿ ಕಾಣುತ್ತಾನೆ. ಆದರೂ ಸಹ ಸ್ವಾರ್ಥತೆಯಿಂದಾಗಿ ಪ್ರಾಣಿಗಳಿಗಿಂತಲೂ ಕೀಳಾಗಿ ಜೀವಿಸುತ್ತಾನೆ ಎಂದರು.

ಸರ್ವರೂ ಜೀವನದಲ್ಲಿ ಧಾರ್ಮಿಕತೆಯ ಮನೋಭಾವನೆಯನ್ನು ಅಳವಡಿಸಿಕೊಂಡು ಶಿವನಾಮವನ್ನು ಸ್ಮರಿಸುತ್ತಾ ಮುನ್ನಡೆದಾಗ ಅಂತಹವರ ಜೀವನ ಸಾರ್ಥಕತೆಯಿಂದ ಕೂಡಿರುತ್ತದೆ. ಶಿವನಾಮ ಸ್ಮರಣೆಯಿಂದ ಜೀವನದಲ್ಲಿ ಮಾಡಿದ ಪಾಪ ಕರ್ಮಗಳು ದೂರವಾಗುವುದರ ಮೂಲಕ ಮನುಷ್ಯನು ಮುಕ್ತಿ ಹೊಂದಲು ಸಾಧ್ಯವಾಗಲಿದೆ ಎಂದು ಶ್ರೀಗಳು ತಿಳಿಸಿದರು.

ಬುದ್ನಿಯ ಸಿದ್ಧಾರೂಢ ಮಠದ ಪ್ರಭಾನಂದ ಶ್ರೀಗಳು ಮಾತನಾಡಿ, ಜೀವನ ಪೂರ್ಣವಾಗಿ ನಂಬಿಕೆ, ವಿಶ್ವಾಸದ ಮೇಲೆಯೇ ನಿಂತಿದೆ. ಪ್ರತಿಯೊಬ್ಬರಲ್ಲಿ ನಂಬಿಕೆಯೊಂದಿದ್ದರೆ, ಏನನ್ನಾದರೂ ಸಾಧಿಸಬಹುದು. ಔಷಧಿ, ವೈದ್ಯಾಧಿಕಾರಿಗಿಂತಲೂ ಹತ್ತು ಪಟ್ಟು ನಂಬಿಕೆ ಎನ್ನುವುದು ಸಂಜೀವಿನಿಯಾಗಿ ಕೆಲಸ ಮಾಡುತ್ತದೆ. ನಂಬಿಕೆ ಇದ್ದರೆ ಜೀವನ ಪಾವನ. ಕಳೆದುಕೊಂಡರೆ ಜೀವನ ನಶ್ವರ ಎಂದರು.

ಹುಬ್ಬಳ್ಳಿಯ ಸಿದ್ಧಾರೂಢರು ಸ್ವಯಂ ಪರಶಿವನ ಅವತಾರವಾಗಿದ್ದು, ಮನುಷ್ಯರಲ್ಲಿರುವ ದುರ್ಗುಣಗಳನ್ನು ದೂರ ಮಾಡಿ ಸಾತ್ವಿಕ ಗುಣಗಳನ್ನು ಮೈಗೂಡಿಸಿಕೊಳ್ಳುವ ಶಕ್ತಿ ತುಂಬಿದವರು. ಇಂದಿನ ಆಧುನಿಕತೆಯಲ್ಲಿ ಬಹುತೇಕರು ವಿದೇಶಿ ವ್ಯಾಮೋಹಕ್ಕೊಳಗಾಗಿ ನಮ್ಮ ಸಂಸ್ಕೃತಿ, ಸಂಪ್ರದಾಯ ಮರೆಯುವುದರ ಜೊತೆಗೆ ತಮ್ಮತನವನ್ನೇ ಮರೆತು ವಿನಾಶದಂಚಿನತ್ತ ಬದುಕು ಸವೆಸುತ್ತಿದ್ದಾರೆ ಎಂದು ಶ್ರೀಗಳು ಹೇಳಿದರು.

ಶ್ರೀಮಠದ ಪೀಠಾಧಿಪತಿ ಮಲ್ಲಯ್ಯ ಸ್ವಾಮೀಜಿ, ಹುಬ್ಬಳ್ಳಿಯ ಸಿದ್ಧಾರೂಢಮಠದ ಶ್ರೀ ಸಚ್ಚಿದಾನಂದ ಸ್ವಾಮಿಜಿ, ಚೌಟಗಿಯ ಲಿಂಗಯ್ಯಸ್ವಾಮೀಜಿ, ತೆಲಗಿಯ ಸಿದ್ಧಾರೂಢ ಮಠದ ಪೂರ್ಣಾನಂದ ಶ್ರೀಗಳು, ಹುಬ್ಬಳ್ಳಿ ಜಡೆಸಿದ್ಧೇಶ್ವರ ಮಠದ ರಾಮಾನಂದ ಶ್ರೀಗಳು ಉಪದೇಶಾಮೃತ ನೀಡಿದರು.

ಸಿದ್ದಪ್ಪ ಪೂಜಾರ, ಬಿರಾದಾರ, ಶಿವಪ್ಪ ಕುರವತ್ತಿ, ಕರಬಸಪ್ಪ ಮಲ್ಲಾಡದ, ಪೂರ್ಣಿಮಾ ಕುರವತ್ತಿ, ದೇವೇಂದ್ರಪ್ಪ, ಭೀಮರಡ್ಡಿ ಹಾದಿಮನಿ, ರೇವಣಪ್ಪ ಸೇರಿದಂತೆ ಇನ್ನಿತರರಿದ್ದರು. ಪವನಕುಮಾರ ಮಲ್ಲಾಡದ ಸ್ವಾಗತಿಸಿದರು.

# ಅಯೋಧ್ಯೆ ರಾಮ ಮಂದಿರ ವಿವಾದಿತ, ದೇಣಿಗೆ ಕೊಡುವುದಿಲ್ಲ : ಮಾಜಿ ಸಿಎಂ ಸಿದ್ದರಾಮಯ್ಯ

ನವದೆಹಲಿ, ಫೆ. 17 - ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮ ಮಂದಿರ ವಿವಾದಿತವಾಗಿದ್ದು, ಹೀಗಾಗಿ ರಾಮ ಮಂದಿರ ನಿರ್ಮಾಣಕ್ಕೆ ದೇಣಿಗೆ ನೀಡುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭೇಟಿಗೆ ದೆಹಲಿಗೆ ತೆರಳಿದ್ದ ಅವರು, ಕರ್ನಾಟಕ ಭವನದಲ್ಲಿ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು, ರಾಮ ಮಂದಿರ ನಿರ್ಮಾಣಕ್ಕೆ ದೇಣಿಗೆ ಕೇಳಲು ನನ್ನ ಬಳಿಯೂ ಬಂದಿದ್ದರು. ಆದರೆ ವಿವಾದಿತ ಮಂದಿರಕ್ಕೆ ಹಣ ಕೊಡುವುದಿಲ್ಲ ಎಂದು ಹೇಳಿ ಅವರನ್ನು ಹಿಂದೆ ಕಳುಹಿಸಿದ್ದೇನೆ ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ರಾಮ ಮಂದಿರ ವಿವಾದವನ್ನು ಇತ್ಯರ್ಥ ಪಡಿಸಿದರೂ ಸಹ, ಕೆಲವರಲ್ಲಿ ಆ ಕುರಿತು ವಿವಾದವಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಒಂದು ವೇಳೆ ಬೇರೆ ಕಡೆ ರಾಮ ಮಂದಿರ ನಿರ್ಮಾಣ ಮಾಡಿದ್ದರೆ, ಅದಕ್ಕೆ ದೇಣಿಗೆ ನೀಡುತ್ತಿದ್ದೆ ಎಂದು ಹೇಳಿರುವ ಸಿದ್ದರಾಮಯ್ಯ, ಅಯೋಧ್ಯೆ ಮಂದಿರ ನಿರ್ಮಾಣಕ್ಕೆ ಹಣ ಸಂಗ್ರಹಿಸುತ್ತಿರುವುದರ ಲೆಕ್ಕದ ಬಗ್ಗೆಯೂ ಪ್ರಶ್ನಿಸಿದ್ದಾರೆ. ಈ ಹಿಂದೆ ರಾಮ ಮಂದಿರ ನಿರ್ಮಾಣಕ್ಕೆಂದು ಹಣ ಹಾಗೂ ಇಟ್ಟಿಗೆ ಸಂಗ್ರಹಿಸಿದ್ದರು. ಆದರೆ ಇಟ್ಟಿಗೆಯನ್ನು ಊರಾಚೆ ಎಸೆದು, ಹಣ ಮಾತ್ರ ತೆಗೆದುಕೊಂಡು ಹೋಗಿದ್ದರು. ಇದೆಲ್ಲಾ ರಾಮನ ಲೆಕ್ಕ ಕೃಷ್ಣನ ಲೆಕ್ಕ ಎಂದು ಸಿದ್ದರಾಮಯ್ಯ ಲೇವಡಿ ಮಾಡಿದ್ದಾರೆ.

ಸಾರ್ವಜನಿಕರಿಂದ ಹಣ ಸಂಗ್ರಹಿಸುವವವರು ಪಾರದರ್ಶಕವಾಗಿ ನಡೆದುಕೊಳ್ಳಬೇಕಾಗುತ್ತದೆ. ಪಿಎಂ ಕೇರ್ಸ್ ನಿಧಿಯ ಲೆಕ್ಕವನ್ನೇ ಕೊಡದಿರುವ ಈಗಿನ ಬಿಜೆಪಿ ಸರ್ಕಾರ ರಾಮಮಂದಿರ ನಿರ್ಮಾಣಕ್ಕೆ ಸಂಗ್ರಹಿಸುವ ಹಣದ ಲೆಕ್ಕ ನೀಡುತ್ತಾ? ಎಂದು ಸಾರ್ವಜನಿಕರು ಪ್ರಶ್ನಿಸುತ್ತಿದ್ದಾರೆ ಎಂದು ಹೇಳಿದ್ದಾರೆ.

# ರಾಣೇಬೆನ್ನೂರಿನಲ್ಲಿ ಸಡಗರ, ಸಂಭ್ರಮದ ರಥೋತ್ಸವ



ರಾಣೇಬೆನ್ನೂರು, ಫೆ.16 - ಸ್ಥಳೀಯ ಸಿದ್ದಾರೂಢ ಮಠದ ಪೀಠಾಧಿಪತಿ ಶ್ರೀ ಮಲ್ಲಯ್ಯಜ್ಜ ನೇತೃತ್ವದಲ್ಲಿ ಇಂದು ಸಂಜೆ ಶ್ರೀ ಸಿದ್ದಾರೂಢ ಸ್ವಾಮೀಜಿ ರಥೋತ್ಸವವು ಸಡಗರ, ಸಂಭ್ರಮದಿಂದ ನೆರವೇರಿತು.

# ನಾಲ್ವರಲ್ಲಿ ದಕ್ಷಿಣ ಆಫ್ರಿಕಾದ ರೂಪಾಂತರಿ ಕೊರೊನಾ ಪತ್ತೆ : ಕೇಂದ್ರ

ನವದೆಹಲಿ, ಫೆ. 16 – ನಾಲ್ವರಲ್ಲಿ ದಕ್ಷಿಣ ಆಫ್ರಿಕಾದ ರೂಪಾಂತರಿ ಕೊರೊನಾ ಸೋಂಕಿರುವುದು ಜನವರಿಯಲ್ಲಿ ಪತ್ತೆಯಾಗಿತ್ತು. ಫೆಬ್ರವರಿ ಮೊದಲ ವಾರದಲ್ಲಿ ಬ್ರೆಜಿಲ್ ರೂಪಾಂತರಿ ವೈರಸ್ ಒಬ್ಬರಲ್ಲಿರುವುದು ಪತ್ತೆಯಾಗಿತ್ತು ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ದಕ್ಷಿಣ ಆಫ್ರಿಕಾದಿಂದ ಬಂದ ಇಬ್ಬರು ಹಾಗೂ ಅಂಗೋಲಾ, ತಾಂಜೇನಿಯಾದಿಂದ ಬಂದ ತಲಾ ಒಬ್ಬರಲ್ಲಿ ಕೊರೊನಾ ಸೋಂಕಿರುವುದು ಕಂಡು ಬಂದಿತ್ತು ಎಂದು ಐ.ಸಿ.ಎಂ.ಆರ್. ಪ್ರಧಾನ ನಿರ್ದೇಶಕ ಬಲರಾಮ್ ಭಾರ್ಗವ ಹೇಳಿದ್ದಾರೆ. ಇವರೆಲ್ಲರನ್ನೂ ಪರೀಕ್ಷೆಗೆ ಒಳಪಡಿಸಿ ಪ್ರತ್ಯೇಕವಾಗಿರಿಸಲಾಗಿದೆ.

# ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ದಾವಣಗೆರೆ. ಫೆ 16 - ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳಿಗೆ ಅನುಷ್ಠಾನ ಮಾಡಲಾಗುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಮತ್ತು ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿರುವ ಪೋಷಕರ ಮಕ್ಕಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ನವೀನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಲು ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಡಿ ನವೀನ ಮತ್ತು ನವೀಕರಣ ವಿದ್ಯಾರ್ಥಿಗಳು ವಿದ್ಯಾರ್ಥಿ ವೇತನ ಕೋರಿ ಅರ್ಜಿ ಸಲ್ಲಿಸಲು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದೆ.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇಂದಿನಿಂದ ಬರುವ ಮಾರ್ಚ್ 15 ರವರೆಗೆ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ತಂತ್ರಾಂಶದಲ್ಲಿ ಅವಕಾಶ ನೀಡಲಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಕೌಸರ್ ರೇಷ್ಮಾ ತಿಳಿಸಿದ್ದಾರೆ.

# ಐದು ವರ್ಷದ ಗ್ರಾ.ಪಂ. ಆಡಳಿತಕ್ಕೆ 5 ದಿನಗಳ ತರಬೇತಿ

## ಹೊನ್ನಾಳಿ ತಾಲ್ಲೂಕಿನ ಅರಕೆರೆ, ಅರಬಗಟ್ಟೆ, ಹರಳಹಳ್ಳಿ, ಹನುಮ ಸಾಗರ ಗ್ರಾ.ಪಂ. ಸದಸ್ಯರಿಗೆ ತರಬೇತಿ



ಹೊನ್ನಾಳಿ, ಫೆ.16- ಮಾಧ್ಯಮದಲ್ಲಿ ತಿಳಿದಂತೆ ಒಂದೆಡೆ 88 ವರ್ಷದ ವೃದ್ಧೆ ಪಂಚಾಯಿತಿ ಸದಸ್ಯೆ. ಆದರೆ ಸಮೀಪದ ಜಗಳೂರು ತಾಲ್ಲೂಕಿನ ಸೊಕ್ಕೆ ಪಂಚಾಯ್ತಿಯಲ್ಲಿ ಅಮೇರಿಕಾದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇಂಜಿನಿಯರ್ ಒಬ್ಬರು ಬಂದು ಪಂಚಾಯ್ತಿ ಅಧ್ಯಕ್ಷೆ ಆಗುತ್ತಾರೆ ಎಂದರೆ ಪಂಚಾಯಿತಿ ಸದಸ್ಯರ ಹಾಗೂ ಅಧ್ಯಕ್ಷರ ಆಯ್ಕೆಗೆ ಪ್ರಸ್ತುತ ದಿನಗಳಲ್ಲಿ ಎಷ್ಟು ಮಹತ್ವ ಹಾಗೂ ಆಕರ್ಷಣೆಗೆ ಒಳಗೊಂಡಿದೆ ಎಂಬುದನ್ನು ತಿಳಿಯಬೇಕಿದೆ ಎಂದು ಹೊನ್ನಾಳಿ ಇಓ ಗಂಗಾಧರ ಮೂರ್ತಿ ಹೇಳಿದರು.

ಮಂಗಳವಾರ ಸಾಮರ್ಥ್ಯ ಸೌಧದಲ್ಲಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ ಮೈಸೂರು ಇವರ ಆಶ್ರಯದಲ್ಲಿ ಗ್ರಾಮ ಪಂಚಾಯ್ತಿ ಚುನಾಯಿತ ಪ್ರತಿನಿಧಿಗಳಿಗೆ ನಡೆದ ತರಬೇತಿ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೊನ್ನಾಳಿ ಸೇರಿದಂತೆ 176 ತಾಲ್ಲೂಕುಗಳಲ್ಲಿ ಈ ತರಬೇತಿ ನಡೆಯುತ್ತಿದ್ದು, ಸ್ಥಾಯಿ ಸಮಿತಿ ನಂತರವೇ ಸಾಮಾನ್ಯ ಸಭೆಗೆ ಸಿದ್ಧತೆಗಳಾಗಬೇಕಿದೆ. ಸಭೆಯ ಹಿಂದಿನ ದಿನಗಳಲ್ಲಿ ತುರ್ತಾಗಿ ಚಿಂತಿಸಿ ಸಭೆ ನಿಗದಿಗೊಳಿಸುವ ಕ್ರಮ ಕೈಗೊಳ್ಳುವುದು ನಿಲ್ಲಬೇಕು. ಹೆಚ್ಚು ಸಮಯ ತರಬೇತಿಯಲ್ಲಿ ಸದಸ್ಯರು ತೊಡಗಿಸಿಕೊಂಡಿದ್ದೇ ಆದರೆ ಮುಂದೆ ಒಗ್ಗಟ್ಟಿನಿಂದ ಪಂಚಾಯ್ತಿ ಕಾಮಗಾರಿ ಆರಂಭಿಸಲು ಸಾಧ್ಯ ಎಂದರು.

ಸಿಡಿಪಿಓ ಮಹಾಂತಸ್ವಾಮಿ ಮಾತನಾಡಿ ಪಂಚಾಯ್ತಿಯಲ್ಲಿ ಆಡಳಿತ ಪಕ್ಷ್ವೇ ಅಲ್ಲ ಅತಿ ಮುಖ್ಯವಾಗಿ ಆರ್ಥಿಕ ನಿರ್ವಹಣೆ ಮಾಡಬೇಕಿದೆ. ಇಲಾಖೆಯಲ್ಲಿ ಅಂಗನವಾಡಿ ಮಕ್ಕಳ ನಿರ್ವಹಣೆ ಅನಾಥ, ಸಂಕಷ್ಟ, ದೌರ್ಜನ್ಯಕ್ಕೆ ಒಳಗಾದ ಮಕ್ಕಳ, ಬಾಲಕಾರ್ಮಿಕರ ರಕ್ಷಣೆ, ಈ ಸಂಬಂಧ ವಕೀಲರ ಸಲಹೆಗಳನ್ನು ಪಡೆಯಲು ಅವಕಾಶವಿದೆ ಎಂದರು.

ಪಂಚಾಯಿತಿ ಸಹಾಯಕ ನಿರ್ದೇಶಕ ರಾಘವೇಂದ್ರ ಮಾತನಾಡಿ, 5 ದಿನಗಳ ತರಬೇತಿ 5 ವರ್ಷದ ಆಡಳಿತಕ್ಕೆ ಸಹಕಾರಿಯಾಗಲಿದೆ. 28 ಇಲಾಖೆಗಳ ಪರಿಚಯ, ಕಾರ್ಯಯೋಜನೆಯ ಮಹತ್ವವನ್ನು ಪಂಚಾಯ್ತಿ ಹೊಂದಿದೆ ಎಂದು ಹೇಳಿದರು.

ಅಕ್ಷರ ದಾಸೋಹದ ರುದ್ರಪ್ಪ ಮಾತನಾಡಿ, ಶಾಲೆಗಳ ಅಭಿವೃದ್ಧಿಗೆ ಯೋಜನೆ ತಯಾರಿಸಲು ಅವಕಾಶವಿದೆ ಎಂದರು. ಆರೋಗ್ಯಾಧಿಕಾರಿ ಡಾ. ಕೆಂಚಪ್ಪ ಮಾತನಾಡಿ, ಪ್ರಾಥಮಿಕ ಹಂತದಲ್ಲೇ ಎಲ್ಲರಿಗೂ ಆರೋಗ್ಯದ ಬಗ್ಗೆ ಆಶಾ ಕಾರ್ಯಕರ್ತೆಯರು ತಿಳುವಳಿಕೆ ನೀಡಲಿದ್ದಾರೆ. 6 ಹಳ್ಳಿಗಳಿಂದ ಒಂದು ಉಪಕೇಂದ್ರವಿದ್ದು, ಆರೋಗ್ಯ ಸುಧಾರಣೆಗಾಗಿ ಕೆಲ ಸಮಿತಿಗಳಿವೆ ಎಂದರು.

ಮೈಸೂರಿನಲ್ಲಿ ತರಬೇತಿ ಪಡೆದ ಹೇಮಲತ, ಭೋಜರಾಜ, ಸರಿತ, ಸೌಂದರ್ಯ, ಶ್ವೇತಾ ತರಬೇತುದಾರರಾಗಿ ಪಾಲ್ಗೊಂಡಿದ್ದರು. ಹನುಮಸಾಗರದ ಪಂಚಾಯಿತಿ ಅಧ್ಯಕ್ಷೆ ಬಸಮ್ಮ ಮಾತನಾಡಿದರು.

ಅರಕೆರೆ ಪಂಚಾಯ್ತಿ ಅಧ್ಯಕ್ಷ ಎ.ಬಿ. ರಂಗಪ್ಪ, ಹರಳಹಳ್ಳಿ ಅಧ್ಯಕ್ಷೆ ನಿರ್ಮಲ, ಅರಬಗಟ್ಟೆ ಅಧ್ಯಕ್ಷೆ ರೇಣುಕಮ್ಮ ಉಪಸ್ಥಿತರಿದ್ದರು. ಹೇಮಲತ ಪಾರ್ಥಿಸಿ, ಮಹಮ್ಮದ್ ರಫೀಕ್ ಸ್ವಾಗತಿಸಿದರು. ಉಮಾ ಓಂಕಾರ್ ಕಾರ್ಯಕ್ರಮ ನಿರೂಪಿಸಿದರು.

# ರಂಗ ಕಲಾವಿದರಿಂದ ಬಸವರಾಜ ಐರಣಿ ಅವರಿಗೆ ರಂಗ ಗೌರವ



ದಾವಣಗೆರೆ, ಫೆ.16 - ನಗರದ ಶ್ರೀ ಪುಟ್ಟರಾಜ ಗವಾಯಿ ಕಲಾ ನಾಟಕ ಸಂಘದ ಕಲಾವಿದರಿಂದ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಗೆ ಭಾಜನರಾಗಿರುವ ರಂಗ ಕಲಾವಿದ, ಪತ್ರಕರ್ತ ಬಸವರಾಜ ಐರಣಿ ಅವರಿಗೆ ನಗರದ ಬಸವ ಮುದ್ರಣ ಕಾರ್ಯಾಲಯದಲ್ಲಿ 'ರಂಗ ಗೌರವ' ಸಲ್ಲಿಸಿ ಸನ್ಮಾನಿಸಲಾಯಿತು.

ಕಲಾ ಸಂಘದ ಅಧ್ಯಕ್ಷ ಪಿ.ಮಲ್ಲಿಕಾರ್ಜುನ ಐರಣಿ ಮಾತನಾಡಿ, 5 ದಶಕಗಳಿಂದ ರಂಗಭೂಮಿಯಲ್ಲಿ ಕ್ರಿಯಾಶೀಲ ನಟ, ಸಂಘಟಕ, ಹೋರಾಟಗಾರ, ಲೇಖಕರಾಗಿ ಕಾರ್ಯನಿರ್ವಹಿಸುತ್ತಾ ಕಲಾವಿದರ ಒಡನಾಡಿಯಾಗಿ, ಅವಿರತ ಸೇವೆ ಸಲ್ಲಿಸುತ್ತಾ ಬಂದಿರುವ ಬಸವರಾಜ ಐರಣಿ ಅವರಿಗೆ ಅಕಾಡೆಮಿ ಪ್ರಶಸ್ತಿ ಲಭಿಸಿರುವುದು ನಗರಕ್ಕೆ ಕೀರ್ತಿ ತಂದಂತಾಗಿದೆ ಎಂದು ಹರ್ಷ ವ್ಯಕ್ತಪಡಿಸಿದರು.

ಸಂಘದ ಕಾರ್ಯದರ್ಶಿ ನಾಗರಾಜ ಮುತ್ತಿಗಿ, ಕಲಾವಿದರಾದ ಎಸ್.ಎಲ್. ಚಂದ್ರಶೇಖರಯ್ಯ, ಶಿವಳ್ಳಿ ಮೈಲಪ್ಪ, ಹೆಚ್.ಎಂ.ಮಲ್ಲಿಕಾರ್ಜುನಯ್ಯ, ಕೆ. ಚಂದ್ರಶೇಖರ್, ಹೆಚ್.ಕರಿಯಪ್ಪ, ಕೆ.ಸರೋಜಮ್ಮ, ಉಮಾದೇವಿ, ಶೃತಿ ಮೈಲಪ್ಪ, ಸಿ.ನೇತ್ರ, ರೇಣುಕಾ ಇತರರು ಉಪಸ್ಥಿತರಿದ್ದರು.

ಅಭಿನಂದನೆಯನ್ನು ಸ್ವೀಕರಿಸಿದ ಬಸವರಾಜ್ ಐರಣಿ ಮಾತನಾಡಿ, ನಿಮ್ಮೆಲ್ಲರ ಹಾರೈಕೆ, ಸಹಕಾರ ಸದಾಶಯಗಳಿಂದ ಕಲಾರಂಗದಲ್ಲಿ ಒಂದಿಷ್ಟು ಸೇವೆ ಮಾಡುವ ಅವಕಾಶ ದೊರೆಯಿತು, ನಿಮ್ಮ ಅಭಿಮಾನಕ್ಕೆ ಸದಾ ಕೃತಜ್ಞನಾಗಿದ್ದೇನೆಂದು ಹೇಳಿದರು.

# ಡಿಸಿ - ಸಿಇಓ - ಅಧಿಕಾರಿಗಳ ಗ್ರಾಮ ವಾಸ್ತವ್ಯ : ಅರ್ಜಿಗಳ ವಿಲೇವಾರಿ

ದಾವಣಗೆರೆ, ಫೆ.16- ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಹಾಗೂ ಕಂದಾಯ ಇಲಾಖೆಯ ಇತರೆ ಅಧಿಕಾರಿಗಳ ಗ್ರಾಮ ವಾಸ್ತವ್ಯ ಕಾರ್ಯಕ್ರಮವನ್ನು ಇದೇ ದಿನಾಂಕ 20 ರಂದು ಜಗಳೂರು ತಾಲ್ಲೂಕಿನ ಸೊಕ್ಕೆ ಹೋಬಳಿ ಅಗಸನಹಳ್ಳಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿರುತ್ತದೆ.

ಸಾರ್ವಜನಿಕರು ಈ ದಿನದಂದು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಂದಾಯ ಇಲಾಖೆಯ ವಿವಿಧ ಸೇವೆಗಳು/ ಯೋಜನೆಗಳಾದ ಪೌತಿ ಖಾತೆ ಬದಲಾವಣೆ, ಸಾಮಾಜಿಕ ಭದ್ರತಾ ಯೋಜನೆ ಪಿಂಚಣಿ ಸೌಲಭ್ಯ, ಅತಿವೃಷ್ಠಿ/ ಬರ ಪರಿಹಾರ, ಪಡಿತರ ಚೀಟಿ, ಪಹಣಿ ಲೋಪದೋಷ ತಿದ್ದುಪಡಿ ಸೌಲಭ್ಯಗಳನ್ನು ಪಡೆದುಕೊಳ್ಳಬಹುದು. ಈಗಾಗಲೇ ಸ್ವೀಕರಿಸಲಾಗಿರುವ ಅರ್ಜಿಗಳನ್ನು ಈ ದಿನಾಂಕದಂದು ಇತ್ಯರ್ಥಪಡಿಸಲಾಗುವುದು.

ಅಂದೇ ಉಳಿದ ತಾಲ್ಲೂಕುಗಳಲ್ಲಿ ತಹಶೀಲ್ದಾರರುಗಳು ಹಾಗೂ ತಾಲ್ಲೂಕು ಮಟ್ಟದ ಇತರೆ ಅಧಿಕಾರಿಗಳು ದಾವಣಗೆರೆ ತಾಲ್ಲೂಕಿನ ಮಾಯಕೊಂಡ ಹೋಬಳಿಯ ಅತ್ತಿಗೆರೆ ಗ್ರಾಮ, ಹರಿಹರ ತಾಲ್ಲೂಕಿನ ಮಲೇಬೆನ್ನೂರು ಹೋಬಳಿಯ ನಿಟ್ಟೂರು ಗ್ರಾಮ, ಹೊನ್ನಾಳಿ ತಾಲ್ಲೂಕಿನ ಸಾಸ್ವೆಹಳ್ಳಿ-2 ಹೋಬಳಿಯ ಕೂಲಂಬಿ ಗ್ರಾಮ, ಚನ್ನಗಿರಿ ತಾಲ್ಲೂಕಿನ ಉಬ್ರಾಣಿ ಹೋಬಳಿಯ ದುರ್ವಿಗೆರೆ ಗ್ರಾಮ, ನ್ಯಾಮತಿ ತಾಲ್ಲೂಕಿನ ಬೆಳಗುತ್ತಿ ಹೋಬಳಿಯ ಚಿನ್ನಿಕಟ್ಟೆ ಗ್ರಾಮ, ಈ ಗ್ರಾಮಗಳಲ್ಲೂ ಸಹಾ ಗ್ರಾಮವಾಸ್ತವ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಿದ್ದಾರೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

# ಆತ್ಮ ನಿರ್ಭರ ಭಾರತ ಯೋಜನೆ : ತೋಟಗಾರಿಕೆ ಮೂಲಸೌಕರ್ಯ ಅಭಿವೃದ್ಧಿಗೆ ಸಹಾಯಕ

ದಾವಣಗೆರೆ, ಫೆ.16- ಕೇಂದ್ರ ಸರ್ಕಾರವು ವಿನೂತನವಾಗಿ ಪ್ರಕಟಿಸಿರುವ 'ಆತ್ಮ ನಿರ್ಭರ ಭಾರತ' ಯೋಜನೆಯಡಿ ಹಣಕಾಸು ಸೌಲಭ್ಯವನ್ನು 'ಕೃಷಿ ಮೂಲಸೌಕರ್ಯ ನಿಧಿ' ಅಡಿಯಲ್ಲಿ ತೋಟಗಾರಿಕೆ ವಲಯದಲ್ಲೇ ಮೂಲಸೌಕರ್ಯಗಳನ್ನು ಅಭಿವೃದ್ದಿಪಡಿಸಲು ಸಹಾಯಕವಾಗಲಿದೆ.

ಸಮುದಾಯ ಸ್ವತ್ತುಗಳಾದ ಕೋಲ್ಡ್ ಸ್ಟೋರೇಜ್, ಸಂಗ್ರಹ ಕೇಂದ್ರಗಳು, ಉತ್ತಮ ಸುಗ್ಗಿಯ ನಂತರದ ನಿರ್ವಹಣೆಗಾಗಿ ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೂ ಸಹ ಸಹಕಾರಿಯಾಗಲಿವೆ. ಈ ಸೌಲಭ್ಯಗಳಿಂದ ರೈತರು ಬೆಳೆದ ಬೆಳೆಗೆ ಉತ್ತಮ ಬೆಲೆ ಪಡೆಯಲು ಸಾಧ್ಯವಾಗಲಿದೆ. ಈ ಸೌಲಭ್ಯಗಳಿಂದಾಗಿ ರೈತರು ತಮ್ಮ ಬೆಳೆಗಳನ್ನು ಸಂಗ್ರಹಿಸಲು ಮತ್ತು ತಮ್ಮ ಸರಕುಗಳನ್ನು ಸರಿಯಾದ ಬೆಲೆಗೆ ಮಾರಾಟ ಮಾಡಲು ಸಾಧ್ಯವಾಗಲಿದೆ ಹಾಗೂ ರೈತರ ಆದಾಯವನ್ನು ಹೆಚ್ಚಿಸುತ್ತದೆ.

ಆಹಾರ ಸಂಸ್ಕರಣೆಯ ಅನುಕೂಲದಿಂದ ರೈತರು ತಮ್ಮ ಬೆಳೆಗಳಿಗೆ ಹೆಚ್ಚಿನ ಬೆಲೆ ಪಡೆಯಲು ಸಾಧ್ಯವಾಗಲಿದೆ. ಇದಕ್ಕಾಗಿ ಕೇಂದ್ರ ಸರ್ಕಾರ ಸಾಲ ನೀಡುವ ಹಲವು ಹಣಕಾಸಿನ ಸಂಸ್ಥೆಗಳ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದು ರೂ.1 ಲಕ್ಷ ಕೋಟಿ ಸಾಲದ ಯೋಜನೆ ಇದಾಗಿದೆ.

**ಅರ್ಹ ಫಲಾನುಭವಿಗಳು :** ಪ್ರಾಥಮಿಕ ಕೃಷಿ ಸಹಕಾರಿ ಸಂಘಗಳು, ಬಹುಪಯೋಗಿ ಸಹಕಾರಿ ಸಂಘಗಳು, ಮಾರುಕಟ್ಟೆ ಸಹಕಾರಿ ಸಂಘಗಳು, ರೈತ ಉತ್ಪಾದಕ ಸಂಸ್ಥೆಗಳು, ಕೃಷಿ ಉದ್ಯಮಿಗಳು, ಕೃಷಿ ಆರಂಭಿಕಗಳು (ಅಗ್ರಿ ಸ್ಟಾರ್ಟ್‌ಅಪ್ಸ್), ಸ್ವಸಹಾಯ ಸಂಘಗಳು, ಜಂಟಿ ಹೊಣೆಗಾರಿಕೆ ಗುಂಪುಗಳು, ಕೇಂದ್ರ/ರಾಜ್ಯ/ಸ್ಥಳೀಯ ಸಂಸ್ಥೆಗಳ ಪ್ರಾಯೋಜಿತ ಪಿಪಿಪಿ ಯೋಜನೆಗಳು, ಮಾಲೀಕತ್ವದ ಸಂಸ್ಥೆಗಳು/ಪಾಲುದಾರಿಕೆ ಸಂಸ್ಥೆಗಳು/ಖಾಸಗಿ ಸೀಮಿತ ಸಂಸ್ಥೆಗಳು, ಕಂಪೆನಿಗಳು, ಪಾಲುದಾರಿಕೆ ಸಂಸ್ಥೆಗಳು ಸೇರಿದಂತೆ ಎಲ್ಲಾ ವ್ಯಾಪಾರ ಘಟಕಗಳು ಅರ್ಹವಾಗಿರುತ್ತವೆ.

ಆಸಕ್ತ ಸಂಸ್ಥೆಗಳು ತೋಟಗಾರಿಕೆ ಇಲಾಖೆಯ ತಾಲ್ಲೂಕುಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಅಥವಾ ಜಿಲ್ಲಾ ತೋಟಗಾರಿಕೆ ಉಪನಿರ್ದೇಶಕರ ಕಚೇರಿ, ದೂರವಾಣಿ ಸಂಖ್ಯೆ: 08192-297090 ನ್ನು ಸಂಪರ್ಕಿಸಬಹುದೆಂದು ತೋಟಗಾರಿಕೆ ಉಪನಿರ್ದೇಶಕರು ತಿಳಿಸಿದ್ದಾರೆ.

SHOP AVAILABLE ON RENT
Shop No.4 Measuring 496 Sft.
At our Ginning Factory Shop Complex
Interested Parties may *contact at :*
M/s R. Hanumanthappa & Son,
Hanumanthappa Buildings,
Poona - Bangalore Road, Davangere - 577 002.
Phone No's.: 258834/258836

ಬೇಕಾಗಿದ್ದಾರೆ
ದಾವಣಗೆರೆಯ ಪ್ರತಿಷ್ಠಿತ ವಿದ್ಯಾಸಂಸ್ಥೆಗೆ
ಡ್ರೈವರ್ ಬೇಕಾಗಿದ್ದಾರೆ
HMV ಲೈಸನ್ಸ್ ಹೊಂದಿರುವವರು ಸಂಪರ್ಕಿಸಿ
ಪಿ.ಎಫ್/ಇ.ಎಸ್.ಐ. ಸೌಲಭ್ಯವಿದೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಫೋನ್ : 92424 62529


ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪತ್ತಿನ ಸಹಕಾರ ಸಂಘ ನಿಯಮಿತ ದಾವಣಗೆರೆ.
ನಂ. 1952/18, 7ನೇ ಅಡ್ಡ ರಸ್ತೆ, ಕುವೆಂಪು ನಗರ,
ಹಳೇ ಆರ್.ಟಿ.ಓ. ಕಛೇರಿ ಹತ್ತಿರ, ಎಂ.ಸಿ.ಸಿ. ಬಿ ಬ್ಲಾಕ್,
ದಾವಣಗೆರೆ-577 004 ಫೋ. : 220511

ಪ್ರಕಟಣೆ

ಈ ಮೂಲಕ ಸದರಿ ಪತ್ತಿನ ಸಹಕಾರ ಸಂಘದ ಸದಸ್ಯರಿಗೆ ತಿಳಿಯಪಡಿಸುವುದೇನೆಂದರೆ, ಸೊಸೈಟಿಯ ಆಡಳಿತ ಮಂಡಳಿಗೆ 5 ಸಹಕಾರಿ ವರ್ಷಗಳ ಅವಧಿಗೆ ಚುನಾವಣೆಯು ದಿನಾಂಕ : 28.02.2021 ರಂದು ನಡೆಸಲು ಉದ್ದೇಶಿಸಲಾಗಿತ್ತು. ಅನಿವಾರ್ಯ ಕಾರಣಗಳಿಂದ ಚುನಾವಣೆಯನ್ನು ಮುಂದೂಡಲಾಗಿದೆ. ಮುಂದಿನ ದಿನಾಂಕವನ್ನು ನೋಟಿಸ್ ಮುಖಾಂತರ ತಿಳಿಸಲಾಗುವುದು.

ಸಹಿ/- ಕಾರ್ಯದರ್ಶಿ
ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಪತ್ತಿನ
ಸಹಕಾರ ಸಂಘ ನಿ., ದಾವಣಗೆರೆ.

# ರಾಷ್ಟ್ರಧರ್ಮ ದ್ರಷ್ಟಾರ ಹರ್ಡೇಕರ್ ಮಂಜಪ್ಪ ಸ್ಮರಣೆ ನಾಳೆ



ನಿರಂಜನ ಶರಣ ಪೂಜ್ಯ ಹರ್ಡೇಕರ್ ಮಂಜಪ್ಪನವರು 'ಕರ್ನಾಟಕದ ಗಾಂಧಿ' ಎಂದು ಹೆಸರು ಪಡೆದವರು. ಮಹಾತ್ಮಾ ಗಾಂಧಿಯವರಿಗೆ ವಿಶ್ವಗುರು ಬಸವೇಶ್ವರರ ಸರ್ವ ಸಮಾನತೆಯ ತತ್ವಗಳನ್ನೆಲ್ಲಾ ಹಿಂದಿಯಲ್ಲಿ ಗ್ರಂಥ ಬರೆದು ತಿಳಿಸಿಕೊಟ್ಟವರು. ದಾವಣಗೆರೆಯ ವಿರಕ್ತಮಠದ ಅಧಿಪತಿಗಳಾದ ಶ್ರೀ ಮೃತ್ಯುಂಜಯ ಮಹಾಸ್ವಾಮಿಗಳ ಕೃಪೆಗೆ ಪಾತ್ರರಾದವರು ಮತ್ತು ಅಥಣಿಯ ವಿರಕ್ತಮಠದ ಶ್ರೀ ಮುರುಘ ರಾಜೇಂದ್ರ ಶಿವಯೋಗಿಗಳಿಂದ ಇಷ್ಟಲಿಂಗ ದೀಕ್ಷೆ ಪಡೆದು, ಕಲ್ಯಾಣ ಶರಣರು ಮೆಚ್ಚುವಂತೆ ಬಾಳಿ ಬದುಕಿದವರು.

ಮೊಟ್ಟಮೊದಲು ದಾವಣಗೆರೆಯಲ್ಲಿ ವಿಶ್ವಗುರು ಬಸವೇಶ್ವರರ ಜಯಂತಿಯನ್ನು ಆಚರಿಸಿದವರು ಹರ್ಡೇಕರ್ ಮಂಜಪ್ಪ. ಇಂದು ಬಸವ ಜಯಂತಿಯನ್ನು ವಿಶ್ವದ ಎಲ್ಲಾ ಜನಾಂಗದವರು ಜಾತಿ, ಮತ, ಪಂಥ ಎಲ್ಲವನ್ನು ಮೀರಿ ಭಕ್ತಿಯಿಂದ ಆಚರಿಸುತ್ತಾರೆ. ಇದಕ್ಕೆ ಕಾರಣರಾದವರು ಶ್ರೀ ಮೃತ್ಯುಂಜಯ ಅಪ್ಪಗಳು.

ಹರ್ಡೇಕರ್ ಮಂಜಪ್ಪನವರು ಮತ್ತು ದಾವಣಗೆರೆಯ ಮಹಾನಗರದ ಪ್ರಮುಖ ವ್ಯಕ್ತಿಗಳು ನಾಗರಿಕರಲ್ಲಿ ಮಂಜಪ್ಪನವರು ಮೊತ್ತ ಮೊದಲನೆಯ ಆಧುನಿಕ ವಚನಕಾರರು. ಅವರ ವಚನಗಳು ಹೀಗಿವೆ.

ಪ್ರಭುವೇ, ಜಪ, ತಪ ಹೋಮ ಹವನಗಳ ನಾನೊಲ್ಲನಯ್ಯ
ಪ್ರಭುವೇ ಧ್ಯಾನ ಧಾರಣ ಸಮಾಧಿಗಳ ನೊಲ್ಲೆನಯ್ಯ,
ಪ್ರಭುವೇ ಸಾಯುಜ್ಯ ಸಾಲೋಕ್ಯ ಸಾರೋಪ್ಯ,
ಪದವಿಗಳ ನೊಲ್ಲೆನಯ್ಯಾ ಪ್ರಭುದೇವಾ, ಜನಸೇವಕಂಗೆ,
ಏಳೇಳು ಜನ್ಮದಲ್ಲಿ ಜನ ಸೇವೆಯನಿತ್ತು ರಕ್ಷಿಸಯ್ಯ
ಪ್ರಭುವೇ, ನೆರೆಯಲ್ಲಿ ವಧುವಿರಲು ಶಾಸನದಲ್ಲಿ ಅರಸಲುಂಟೆ ?

---

ಅಧರ್ಮವು ಮನು 'ಕುಲ'ಕ್ಕಲ್ಲದೆ ತನುವಿಗುಂಟೇನಯ್ಯ ?
ಮನ ಭಿನ್ನವಾಗುವ ಪರಿ ಧರ್ಮ ಭಿನ್ನವಾಗಿಪ್ಪುದು ಸಹಜವಯ್ಯ
ಗೋವಿಗೆ ನಾನಾವರ್ಣಗಳಲ್ಲದೇ ಕ್ಷೀರಕ್ಕೆ ನಾನಾವರ್ಣಗಳುಂಟೆ ?
ಧರ್ಮ ಭಿನ್ನವಾಗಿರ್ದಡೆ ಹೃದಯ ಭಿನ್ನವಾಗಬಹುದೇ ?
ಪ್ರಭುದೇವಾ ಜನ ಸೇವಕಂಗೆ, ಗೋವರ್ಣ ಕಾಣದಂತೆ,
ಕ್ಷೀರ ಒಂದೇ ಕಾಣುವಂತೆ ಮಾಡಯ್ಯ

ಅವರು ನಾಲ್ಕು ಕನ್ನಡ ಪತ್ರಿಕೆಗಳನ್ನು ದಾವಣಗೆರೆಯಲ್ಲಿ ನಡೆಸಿದ್ದಾರೆ.


(1) ಧನುರ್ಧಾರಿ, (2) ಖಾದಿ ವಿಜಯ, (3) ಉದ್ಯೋಗ, (4) ಶರಣ ಸಂದೇಶ.

ಇವಲ್ಲದೇ ವಿಶ್ವಗುರು ಬಸವೇಶ್ವರರ ಕುರಿತು

ಶರಣು ಶರಣು ಸಂಗನಬಸವ ಎಂಬ 64 ನುಡಿಯ ಸ್ತ್ರೋತ್ರವನ್ನು ರಚಿಸಿದ್ದಾರೆ.

ಇದಲ್ಲದೇ ಎಂಭತ್ತೆಂಟು ಅತ್ಯುತ್ತಮ ಗ್ರಂಥಗಳನ್ನು ರಚಿಸಿ ಕನ್ನಡ ಮಾತೆಯ ಸೇವೆ ಗೈದಿದ್ದಾರೆ.

ಮೊಟ್ಟ ಮೊದಲು ಶ್ರೀ ಬಸವೇಶ್ವರ ಸೇವಾ ದಳವನ್ನು ಸ್ಥಾಪಿಸಿ 1924 ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಬಸವೇಶ್ವರ ಯುವಕ ಸೇವಾದಳವನ್ನು ಕರೆದೊಯ್ದು ಮಹಾತ್ಮಾ ಗಾಂಧೀಜಿಯವರಿಂದ ಸೈ ಎನಿಸಿಕೊಂಡರು. ಬಸವ ಸೇವಾ ದಳದ ಕರಸೇವೆಯನ್ನು ನೋಡಿ ಗಾಂಧೀಜಿಯವರಿಗೆ ಆಶ್ಚರ್ಯ. ಊಟಕ್ಕೆ ನೀಡುವಾಗ ಎಲ್ಲಿಯೂ ಒಂದಗಳು ಅನ್ನ ಚೆಲ್ಲದಂತೆ ಜಾಗ್ರತೆ ವಹಿಸಿದ್ದರು. ಹೀಗೆ ಯುವಕರಿಗೆ ಪ್ರಸಾದದ ಮಹತ್ವ ಕಲಿಸಿದರು. ರಾಷ್ಟ್ರ ಧರ್ಮದ್ರಷ್ಟಾರ ಹರ್ಡೇಕರ್ ಮಂಜಪ್ಪ ಶರಣರು.



ರಾಷ್ಟ್ರಕವಿ ಕುವೆಂಪುರವರಿಂದ ಹರ್ಡೇಕರ್ ಮಂಜಪ್ಪನವರ ಸ್ಮರಣೆ

ಓ ಅಜ್ಞಾತ ಮಹಾತ್ಮರೇ ನಿನಗಿದೋ ನಮಸ್ಕಾರ, ಸಾಷ್ಟಾಂಗ ನಮಸ್ಕಾರ. ನೀನಾರೇ ಆಗಿರು ನೀನೆಲ್ಲಿಯೇ ಇರಲಿ ನಿನಗಿದೋ ನಮಸ್ಕಾರ, ಸಾಷ್ಟಾಂಗ ನಮಸ್ಕಾರ.

ಯಾವ ದೇಶದವನೋ ನೀನು? ಯಾವ ಜಾತಿಯವನೋ ನೀನು?
ಎಂತಾದರಾಗಿರಯ್ಯಾ ನೀನು, ಹೇ ಅಜ್ಞಾತ ಮಹಾತ್ಮನೇ,
ನಿನಗಿದೋ ನಮಸ್ಕಾರ, ಸಾಷ್ಟಾಂಗ ನಮಸ್ಕಾರ.
ಲೋಕದರ ಕಣ್ಣಿಗೆ ನೀನು ಬೀಳದಿರಬಹುದು.
ಲೋಕ ನಿನ್ನನ್ನು ಲೆಕ್ಕಿಸದಿರಬಹುದು.
ಆದರೆ, ಜಗದೀಶನ ಕಣ್ಣಲೆ ನೀನು ತುಂಬಿರುವೆ.
ನೀನೇನಾಗಿರು, ನೀನಾರಾದರೂ ಆಗಿರು
ನೀನೆಲ್ಲಾದರೂ ಇರು ಅಥವಾ ನೀನಿಲ್ಲದೇ ಮೃತನಾಗಿ ಮಣ್ಣಾಗಿರು
ಅಜ್ಞಾತ ಮಹಾತ್ಮ ನಿನಗಿದೋ ನಮಸ್ಕಾರ, ಸಾಷ್ಟಾಂಗ ನಮಸ್ಕಾರ, ಉದ್ದಂಡ ನಮಸ್ಕಾರ.

ಅವರು ಲಿಂಗ್ಯರಾಗುವ ಮುನ್ನ ಅವರ ಅಭಿಮಾನಿಗಳು ಜಗತ್ತಿನ ಜನಕೋಟಿಗೆ ನಿಮ್ಮ ಸಂದೇಶವೇನು ? ಎಂದು ಅವರನ್ನು ಕೇಳಿದಾಗ ಈ ರೀತಿ ಸಂದೇಶ ನೀಡುತ್ತಾರೆ.

1) ಪವಿತ್ರರಾಗಿರಿ (2) ಧೀರರಾಗಿರಿ (3) ಸ್ವತಂತ್ರ ರಾಷ್ಟ್ರ ವೀರರಾಗಿರಿ, ಇದು ಅವರ ರಾಷ್ಟ್ರಭಕ್ತಿ. ಆ ಕಾರಣಕ್ಕಾಗಿಯೇ ಅವರನ್ನು ಇಂದು ಸಹಿತ ಜನರು ರಾಷ್ಟ್ರಧರ್ಮ ದ್ರಷ್ಟಾರ, ಕರ್ನಾಟಕದ ಗಾಂಧಿ ಬಸವ ಜಯಂತಿಯ ರೂವಾರಿ ಎಂದು ಜನಮನದಲ್ಲಿ ಉಳಿದಿದ್ದಾರೆ ಈ ಮಹಾತ್ಮರು.

ಇವರ ಜಯಂತಿಯನ್ನು ದಾವಣಗೆರೆ ಬಸವ ಬಳಗ ಹಾಗೂ ಜಾಗತಿಕ ಲಿಂಗಾಯಿತ ಮಹಾಸಭಾ ವತಿಯಿಂದ ದಿನಾಂಕ 18-02-2021ರ ಬೆಳಿಗ್ಗೆ 8 ಗಂಟೆಗೆ ಹರ್ಡೇಕರ್ ಮಂಜಪ್ಪ ವೃತ್ತದಲ್ಲಿ ಆಚರಿಸಲಾಗುತ್ತಿದ್ದು, ಆ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಮಹಾಂತೇಶ್ ಎಸ್.ಬೀಳಗಿ, ಮಹಾಪೌರ ಬಿ.ಜಿ. ಅಜಯಕುಮಾರ್, ಮಹಾನಗರ ಪಾಲಿಕೆ ಸದಸ್ಯರಾದ ಸೋಗಿ ಶಾಂತಕುಮಾರ್, ಎಲ್.ಆರ್. ಶಿವಕುಮಾರ್, ಶಿವನಗೌಡ ಟಿ. ಪಾಟೀಲ್, ದಾವಣಗೆರೆ ಬಸವಬಳಗದ ಅಧ್ಯಕ್ಷ ವೀರಭದ್ರಪ್ಪ ದೇವಿಗೆರೆ ಆಗಮಿಸುವರು. ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಎಂ. ಶಿವಕುಮಾರ್ ಅಧ್ಯಕ್ಷತೆ ವಹಿಸುವರು. ಬಸವ ಬಳಗದ ಪ.ಪೂ. ವಿ. ಸಿದ್ದರಾಮಣ್ಣ ಶರಣರು ಸಾನ್ನಿಧ್ಯ ವಹಿಸುವರು.

- ಅಗಡಿ ಮಹಾಂತೇಶ್

# 6,7,8 ಪೂರ್ಣ ತರಗತಿ

**(1ನೇ ಪುಟದಿಂದ)** ದೊಡ್ಡ ಪ್ರಮಾಣದಲ್ಲಿ ಇರುವುದರಿಂದ ಆ ರಾಜ್ಯದ ನಮ್ಮಗಡಿ ಭಾಗದಲ್ಲಿ ಮಾತ್ರ 8ನೇ ತರಗತಿ ಮಾತ್ರ ಆರಂಭಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಶಾಲೆಗಳನ್ನು ನಡೆಸಲು ಪೂರ್ಣ ತಯಾರಿ ಮಾಡಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ವಸತಿ ನಿಲಯಗಳನ್ನು ಆರಂಭಿಸಲು ಸಂಬಂಧ ಪಟ್ಟ ಇಲಾಖೆಗೆ ಮನವಿ ಮಾಡಿಕೊಳ್ಳಲಾಗುವುದು ಎಂದೂ ಅವರು ಇದೇ ಸಂದರ್ಭದಲ್ಲಿ ಹೇಳಿದ್ದಾರೆ.

ಅದೇ ರೀತಿ ಸಾರಿಗೆ ಇಲಾಖೆಯ ವಿವಿಧ ನಿಗಮಗಳಿಂದ ಬಸ್‌ಗಳನ್ನು ಹೆಚ್ಚು ಟ್ರಿಪ್ ಓಡಿಸಲು ಕ್ರಮ ಕೈಗೊಳ್ಳಲಾಗುವುದು.

ಶಾಲೆಗಳ ಆರಂಭಕ್ಕೂ ಮುನ್ನ ಸಂಬಂಧಪಟ್ಟ ಶಿಕ್ಷಕರು ಕೋವಿಡ್ ಟೆಸ್ಟ್ ಮಾಡಿಸಿಕೊಳ್ಳಬೇಕು, ಅಲ್ಲದೆ, ಶಾಲೆ ಆರಂಭದ ನಂತರ ಮಕ್ಕಳು ಮತ್ತು ಶಿಕ್ಷಕರಿಗೆ ರ‍್ಯಾಂಡಂ ಟೆಸ್ಟ್ ಮಾಡಲಾಗುವುದು, ಮಕ್ಕಳಿಗೆ ಸದ್ಯಕ್ಕೆ ಶಾಲೆಗೆ ಬರುವಂತೆ ಕಡ್ಡಾಯ ನಿಯಮ ಇಲ್ಲ ಎಂದರು.

ತಜ್ಞರ ಸಲಹಾ ಸಮಿತಿಯು ಪ್ರೌಢಶಿಕ್ಷಣ ಆರಂಭಿಸಲು ಯಾವುದೇ ತೊಂದರೆ ಇಲ್ಲ, ಆದರೆ, ಕೇಂದ್ರ ಸರ್ಕಾರ ನೀಡಿರುವ ಕೊರೊನಾ ನಿಯಮಾವಳಿಗಳು ಹಾಗೂ ಮುನ್ನೆಚ್ಚರಿಕಾ ಕ್ರಮಗಳನ್ನು ಚಾಚೂ ತಪ್ಪದೇ ಪಾಲಿಸಬೇಕು. ಈ ಬಗ್ಗೆ ಅಧಿಕಾರಿಗಳು ಮೇಲುಸ್ತುವಾರಿ ನೋಡಿಕೊಳ್ಳುವಂತೆ ಕಟ್ಟುನಿಟ್ಟಿನ ಆದೇಶ ಹೊರಡಿಸಲಾಗಿದೆ ಎಂದು ಸಚಿವ ಸುರೇಶ್ ಕುಮಾರ್ ಹೇಳಿದ್ದಾರೆ.

ಕೇರಳ ಮತ್ತು ಮಹಾರಾಷ್ಟ್ರದಲ್ಲಿ ಕೊರೊನಾ ಸೋಂಕು ದೊಡ್ಡ ಪ್ರಮಾಣದಲ್ಲಿ ಹರಡುತ್ತಿರುವುದರಿಂದ ರಾಜ್ಯದಲ್ಲೂ ತುಂಬಾ ಎಚ್ಚರಿಕೆ ವಹಿಸುವುದು ಅನಿವಾರ್ಯ, ಆದ್ದರಿಂದ ಪ್ರಾಥಮಿಕ ಶಾಲೆಗಳನ್ನು ಮುಂದಿನ ಸಭೆ ನಂತರ ಆರಂಭಿಸುವ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದ್ದಾರೆ.

ಕೇಂದ್ರ ಪಠ್ಯಕ್ರಮ ಸಿಬಿಎಸ್‌ಸಿ ಏಪ್ರಿಲ್‌ನಿಂದ ಪೂರ್ಣ ಪ್ರಮಾಣದಲ್ಲಿ ಆರಂಭವಾಗಲಿದೆ ಎಂದ ಅವರು, ಮುಂಬರುವ 2021-22ನೇ ಶೈಕ್ಷಣಿಕ ವರ್ಷ ಜುಲೈ 15ರಿಂದ ರಾಜ್ಯಾದ್ಯಂತ ಆರಂಭವಾಗಲಿದೆ, ಇದಕ್ಕಾಗಿ ಎಲ್ಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಆವರಗೆರೆ, ಬಾಡಾಕ್ರಾಸ್, ಉತ್ತಮ್‌ಚಂದ್ ಲೇಔಟ್, ಆಂಜನೇಯ ಕಾಟನ್ ಮಿಲ್, ಹೊನ್ನೂರು, ಮಲ್ಲಶೆಟ್ಟಿಹಳ್ಳಿ, ಕರಿಲಕ್ಕೇನಹಳ್ಳಿ, ಬಸಾಪುರ, ಚಿಕ್ಕನಹಳ್ಳಿ, ಐಗೂರು, ಲಿಂಗದಹಳ್ಳಿ, ವಡ್ಡಿನಹಳ್ಳಿ, ಚಟ್ಟೋಬನಹಳ್ಳಿ ಗ್ರಾಮಗಳಲ್ಲಿ ಮತ್ತು ಕಾಡಜ್ಜಿ, ನಾಗರಕಟ್ಟೆ, ರಾಂಪುರ, ಬಸವನಾಳ್, ಬೇತೂರು ಮತ್ತು ಪುಟ್ಟಗನಾಳ್ ಗ್ರಾಮಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಕಾಮಗಾರಿ ತ್ವರಿತವಾಗಿ ನಡೆಯುತ್ತಿಲ್ಲ



**(1ನೇ ಪುಟದಿಂದ)** ಅಸಮಾಧಾನ ವ್ಯಕ್ತ ಪಡಿಸಿದರು.

ಅಧಿಕಾರಿಗಳು, ಗುತ್ತಿಗೆದಾರರು ನಿರ್ಲಕ್ಷ್ಯ ಮಾಡದೆ ಮಾರ್ಗಮಧ್ಯೆದಲ್ಲಿನ ಜಮೀನುಗಳಲ್ಲಿ ರೈತರ ಸಂಪೂರ್ಣ ಸಹಕಾರ ಪಡೆದು ಭತ್ತದ ಬೆಳೆ ಬರುವ ತನಕ ಕಾಯದೆ ಬೆಳೆ ಪರಿಹಾರ ಒದಗಿಸಿ ಕಾಮಗಾರಿ ಪೂರ್ಣಗೊಳಿಸಿರಿ ಎಂದು ನಿರ್ದೇಶನ ನೀಡಿದರು.

**ಜಗಳೂರು ತಾಲೂಕಿಗೆ ನೀರಾವರಿ ವರದಾನ:-** ಶಾಸಕ ಎಸ್ ವಿ ರಾಮಚಂದ್ರ ಅವರ ಕನಸಿನಂತೆ ಭದ್ರಾ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಯೋಜನೆಯಾಗಿದ್ದು ಜಗಳೂರಿಗೆ 1200 ಕೋಟಿ ಅನುದಾನದಿಂದ 45 ಸಾವಿರ ಎಕರೆ ಹನಿ ನೀರಾವರಿ ಹಾಗೂ 57 ಕೆರೆ ತುಂಬಿಸುವ ಯೋಜನೆಯಿಂದ ನೀರಾವರಿ ಕನಸ್ಸು ನನಸಾಗಲಿದೆ. ಅಂತರ್ಜಲ ಹೆಚ್ಚಳವಾಗಿ, ಫ್ಲೋರೈಡ್ ಮುಕ್ತವಾಗಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಲಿದೆ ಎಂದರು.

**ಕಳಪೆಯಾದರೆ ಕ್ರಮ:-** ರಾಜನಹಳ್ಳಿ 22 ಕೆರೆ ನೀರು ತುಂಬಿಸುವ ಯೋಜನೆ ಕಾಮಗಾರಿ ಕಳಪೆಯಾಗಿದ್ದು ಅಧಿಕಾರಿಗಳು ಸರಿಯಾದ ಮಾಹಿತಿ ನೀಡುತ್ತಿಲ್ಲ, ಎಲ್ ಅಂಡ್ ಟಿ ಕಂಪನಿ ಕಪ್ಪುಪಟ್ಟಿಗೆ ಸೇರಿಸಲು ನೀರಾವರಿ ಸಚಿವರಿಗೆ ಹಾಗೂ ಮುಖ್ಯಮಂತ್ರಿಗಳಿಗೆ ಲಿಖಿತ ಪತ್ರ ಸಲ್ಲಿಸಿರುವೆ ಎಂದು ಸಂಸದರು ತಿಳಿಸಿದರು.

ಆದರೆ 57 ಕೆರೆ ತುಂಬಿಸುವ ಯೋಜನೆ ಸಿರಿಗೆರೆ ಶ್ರೀಗಳ ಆಶಯದಂತೆ ಕಳಪೆಯಾಗದಂತೆ ನಾನು ಮತ್ತು ಶಾಸಕರು ನಿಗಾವಹಿಸುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಪ್ರತಿ ಹಂತದಲ್ಲಿ ಕಾಮಗಾರಿ ಪ್ರಗತಿಯ ಮೇಲ್ವಿಚಾರಣೆ ನಡೆಸಿದ್ದೇವೆ. ಕಳಪೆ ಕಾಮಗಾರಿಯಾದರೆ ಕಾನೂನು ಕ್ರಮ ಕೈಗೊಳ್ಳುತ್ತೇವೆ ಎಂದರು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಜಗಳೂರು ತಾಲ್ಲೂಕಿಗೆ ಸಿರಿಗೆರೆ ಶ್ರೀಗಳ ಆಶೀರ್ವಾದದಿಂದ 57 ಕೆರೆ ತುಂಬಿಸುವ ಯೋಜನೆ ಕಾಮಗಾರಿ ಭರದಿಂದ ಸಾಗಿದ್ದು. ಈಗಾಗಲೇ 120 ಕೋಟಿ ಹಣ ಬಿಡುಗಡೆಯಾಗಿದೆ. ರಾಜ್ಯದಲ್ಲಿ ಅತಿದೊಡ್ಡ ಜಾಕ್ ವೆಲ್ ಇದಾಗಿದ್ದು 8 ಮೋಟರ್ ಒಂದು ಹೆಚ್ಚುವರಿ ಒಂದು ಮೋಟರ್ ಒಳಗೊಂಡಿದ್ದು ಈ ಯೋಜನೆ ಯಾವ ಕಾರಣಕ್ಕೂ ವಿಫಲವಾಗುವುದಿಲ್ಲ. ನಿರೀಕ್ಷೆಯಂತೆ ಮೊದಲ ಹಂತದಲ್ಲಿ ಜೂನ್ - ಜುಲೈ ಮಾಹೆಯಲ್ಲಿ 17 ಕೆರೆಗಳಿಗೆ ನೀರು ತುಂಬಿಸುವ ಪ್ರಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ಭರವಸೆ ವ್ಯಕ್ತಪಡಿಸಿದರು.

ಈ ನೀರಾವರಿ ಯೋಜನೆಗಳ ಅನುಷ್ಠಾನದಿಂದ ಬರಪೀಡಿತ ತಾಲ್ಲೂಕಿಗೆ ಫ್ಲೋರೈಡ್ ಅಂಶ ಕಡಿಮೆಯಾಗಿ ಶುದ್ಧ ಕುಡಿಯುವ ನೀರು ಸಿಗಲಿದೆ. ನೀರಾವರಿ ಸೌಲಭ್ಯ ದೊರೆಯಲಿದ್ದು ರೈತರಿಗೆ ಅನುಕೂಲವಾಗಲಿದೆ ಎಂದರು. ಮೊದಲ ಹಂತದಲ್ಲಿ ಜಗಳೂರು ತಾಲ್ಲೂಕಿನ 11 ಕೆರೆಗಳು ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ 6 ಕೆರೆಗಳು ಭರ್ತಿಯಾಗಲಿವೆ. ಸೆಪ್ಟೆಂಬರ್ ಅಕ್ಟೋಬರ್ 20 ಹಾಗೂ ನವೆಂಬರ್ ಡಿಸೆಂಬರ್ 20 ಸೇರಿದಂತೆ ಮೂರು ಹಂತಗಳಲ್ಲಿ ಒಟ್ಟು 57 ಕೆರೆಗಳಿಗೆ ನೀರು ತುಂಬಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿ.ಪಂ ಅಧ್ಯಕ್ಷೆ ಶಾಂತಕುಮಾರಿ, ಡಿಸಿಸಿ ಬ್ಯಾಂಕ್ ಅಧ್ಯಕ್ಷ ವೇಣುಗೋಪಾಲರೆಡ್ಡಿ, ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ.ಮಹೇಶ್ , ಮುಖಂಡರಾದ ಚಟ್ನಹಳ್ಳಿ ರಾಜಣ್ಣ, ಪ.ಪಂ ನಾಮನಿರ್ದೇಶನ ಸದಸ್ಯ ಬಿ.ಪಿ.ಸುಭಾನ್, ಸೂರ್ಯಕಿರಣ್, ಶಿವಕುಮಾರ್, ಚಂದ್ರನಾಯ್ಕ, ಸುರೇಶ್ ಗೌಡ, ಎಇಇ ಶ್ರೀಧರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಫಾಸ್ಟ್‌ಟ್ಯಾಗ್ ಜೊತೆ ಸಮಸ್ಯೆ ಕಡ್ಡಾಯ !

**(1ನೇ ಪುಟದಿಂದ)** ಟ್ಯಾಗ್ ಖಾಲಿ ಆಗಿ ಹೊಸ ಟ್ಯಾಗ್ ಖರೀದಿಸಲಾಗಿದೆ ಎಂದು ಐ.ಸಿ.ಐ.ಸಿ.ಐ. ಬ್ಯಾಂಕ್‌ನ ಟ್ಯಾಗ್ ಮಾರುತ್ತಿದ್ದ ರಾಮು ತಿಳಿಸಿ ದರು. ದೇಶಾದ್ಯಂತ ಒಂದೇ ದಿನ ಫಾಸ್‌ಟ್ಯಾಗ್ ಕಡ್ಡಾಯ ಮಾಡಿದ್ದರಿಂದ ಸರ್ವರ್ ಡೌನ್ ಆಗಿರುವ ಸಮಸ್ಯೆ ಕಾಣಿಸಿಕೊಂಡಿದೆ. ಹಿಂದೆಂದೂ ಈ ರೀತಿಯ ಸಮಸ್ಯೆ ಕಾಣಿಸಿಕೊಂಡಿರಲಿಲ್ಲ ಎಂದವರು ಹೇಳಿದರು.

ಫಾಸ್ಟ್‌ಟ್ಯಾಗ್ ವರ್ಷಗಳಿಂದ ಜಾರಿಯಲ್ಲಿದೆ. ಶೇ.90ರಷ್ಟು ಜನರು ಫಾಸ್‌ಟ್ಯಾಗ್ ಈಗಾಗಲೇ ಪಡೆದುಕೊಂಡಿದ್ದಾರೆ. ಆದರೆ, ಫಾಸ್ಟ್‌ಟ್ಯಾಗ್ ಇಲ್ಲದವರು ನಗದು ಪಾವತಿಸಲು ಅವಕಾಶವಿತ್ತು. ಆ ಅವಕಾಶ ಮುಂದುವರೆದಿದೆಯಾದರೂ ದುಪ್ಪಟ್ಟು ಶುಲ್ಕ ಪಾವತಿಸಬೇಕಿದೆ.

ಉದಾಹರಣೆಗೆ ಕಾರಿಗೆ ಫಾಸ್ಟ್‌ಟ್ಯಾಗ್ ಟೋಲ್ 60 ರೂ. ಆಗಿದ್ದರೆ, ನಗದು ಪಾವತಿಸಿದರೆ 120 ರೂ. ಆಗುತ್ತದೆ. ಓವರ್‌ಸೈಜ್ ವಾಹನಗಳ ಶುಲ್ಕ ಫಾಸ್ಟ್‌ಟ್ಯಾಗ್‌ಗೆ 375 ಆಗಿದ್ದರೆ, ನಗದು 750 ರೂ.ಗಳವರೆಗೆ ತಲುಪುತ್ತದೆ. ಮೊದಲ ದಿನ 900ಕ್ಕೂ ಹೆಚ್ಚು ಜನರು ಫಾಸ್ಟ್‌ಟ್ಯಾಗ್ ಇಲ್ಲದೇ ದುಪ್ಪಟ್ಟು ಟೋಲ್ ಕಟ್ಟಿದ್ದಾರೆ.

ಫಾಸ್ಟ್‌ಟ್ಯಾಗ್ ಕಡ್ಡಾಯದ ಕುರಿತು ಪತ್ರಿಕೆಯೊಂದಿಗೆ ಮಾತನಾಡಿದ ಹೆಬ್ಬಾಳು ಟೋಲ್‌ನ ವ್ಯವಸ್ಥಾಪಕ ಬಿ.ಎನ್. ಮಾರುತಿ, ಫಾಸ್ಟ್‌ಟ್ಯಾಗ್ ಜಾರಿಯಿಂದಾಗಿ ತ್ವರಿತವಾಗಿ ಹಣ ಪಾವತಿಸಬಹುದು, ಚಿಲ್ಲರೆ ಸಮಸ್ಯೆ ಇರುವುದಿಲ್ಲ. ಒಂದೇ ದಿನ ಪ್ರಯಾಣ ಮಾಡಿ ವಾಪಸ್ ಬರುವವರು ವಿನಾಯಿತಿ ಪಡೆಯುವುದು ಸುಲಭವಾಗಲಿದೆ. ಟೋಲ್ ಪಾವತಿಯಲ್ಲಿ ಪಾರದರ್ಶಕತೆ ಬರುತ್ತದೆ. ಅಲ್ಲದೇ ಸ್ಥಳೀಯರು ಫಾಸ್ಟ್‌ಟ್ಯಾಗ್ ಮೂಲಕ ವಿನಾಯಿತಿಗಳನ್ನು ಪಡೆಯಬಹುದು ಎಂದು ವಿವರಿಸಿದರು.

ಮೇಲ್ನೋಟಕ್ಕೆ ಎಲ್ಲವೂ ಚೆಂದಾಗಿ ಕಾಣುತ್ತದಾದರೂ, ವಾಸ್ತವದಲ್ಲಿ ತೊಡಕುಗಳು ಹಲವಾರಿವೆ. ಈ ಹಿಂದಿನಿಂದಲೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಸರ್ವರ್‌ನಲ್ಲಿ ಸಮಸ್ಯೆ ಆಗಾಗ ಕಾಣಿಸಿಕೊಳ್ಳುವುದು ನಡೆದೇ ಇದೆ. ಕೆ.ವೈ.ಸಿ. ಅಪ್ಡೇಟ್ ಆಗದೆ ಫಾಸ್ಟ್‌ಟ್ಯಾಗ್ ಕೆಲಸ ಮಾಡುವುದಿಲ್ಲ. ರೀಚಾರ್ಜ್ ಮಾಡಿಸಿಕೊಳ್ಳುವುದನ್ನೇ ಕೆಲವರು ಮರೆತಿರುತ್ತಾರೆ. ಫಾಸ್ಟ್‌ಟ್ಯಾಗ್ ಒದಗಿಸಿದ ಸಂಸ್ಥೆಗಳು ಕೆ.ವೈ.ಸಿ. ಅಪ್ಡೇಟ್ ಮಾಡದಿದ್ದಾಗ ಸಮಸ್ಯೆಗಳು ಉದ್ಭವಿಸುತ್ತವೆ.

ಚಿತ್ರದುರ್ಗದ ಲಾರಿ ಚಾಲಕ ಮುರುಳಿ ಮೂರ್ತಿ ಅವರು ತಮಗಾದ ಸಮಸ್ಯೆ ಬಗ್ಗೆ ಹೇಳುತ್ತಾ, ಮಂಗಳೂರಿನಿಂದ ಇಲ್ಲಿಗೆ ಲಾರಿ ತರುವಾಗ ಎಲ್ಲೂ ಫಾಸ್ಟ್‌ಟ್ಯಾಗ್‌ನಿಂದ ಹಣ ಪಾವತಿಸಲು ಸಾಧ್ಯವಾಗಿಲ್ಲ. ಎಲ್ಲ ಸರಿ ಇದ್ದರೂ ಹಣ ಪಾವತಿಯಾಗಿಲ್ಲ. ನಿನ್ನೆಯವರೆಗೂ ಫಾಸ್ಟ್‌ಟ್ಯಾಗ್ ಕೆಲಸ ಮಾಡದಿದ್ದಾಗ ನಗದೇ ಕೊಡುತ್ತಿದ್ದೆ. ಈಗ ದುಪ್ಪಟ್ಟು ಕೊಡ ಬೇಕಾಗಿರುವುದರಿಂದ ಸಮಸ್ಯೆಯಾಗಲಿದೆ ಎಂದಿದ್ದಾರೆ.

ಅಲ್ಲದೇ, ಫಾಸ್ಟ್‌ಟ್ಯಾಗ್ ಕೆಲಸ ಮಾಡದ ಸಂದರ್ಭದಲ್ಲಿ ಟೋಲ್‌ನವರು ಯಾವುದೇ ಪರಿಶೀಲನೆ ನಡೆಸದೇ ಎಲ್ಲಾ ಸಮಸ್ಯೆ ನಮ್ಮದೇ ಎಂದು ಬಿಡುತ್ತಾರೆ ಎಂದವರು ತಿಳಿಸಿದ್ದಾರೆ.

ಹುಬ್ಬಳ್ಳಿಯಿಂದ ಬೆಂಗಳೂರಿಗೆ ತೆರಳುತ್ತಿದ್ದ ಲಾರಿ ಚಾಲಕ ರಫೀಕ್ ಅವರದು ಮತ್ತೊಂದು ಸಮಸ್ಯೆ. ಅವರ ವಾಹನ 3 ಎಕ್ಸೆಲ್‌ನದ್ದಾಗಿದ್ದರೆ, ಫಾಸ್ಟ್‌ಟ್ಯಾಗ್‌ನಲ್ಲಿ ನಮೂದಾಗಿರುವುದು 2 ಎಕ್ಸೆಲ್ ಎಂದು! ಹೀಗಾಗಿ ಅವರ ಫಾಸ್ಟ್‌ಟ್ಯಾಗ್‌ನಿಂದ ಹಣ ಪಾವತಿಯಾಗುತ್ತಿಲ್ಲ.

ಹೆಬ್ಬಾಳು ಟೋಲ್ ಬಳಿ ಪರಿಶೀಲನೆ ನಡೆಸಿದಾಗ ತಮ್ಮ ಒಂದೇ ಲಾರಿಗೆ ಈ ಹಿಂದೆ ನಾಲ್ಕು ಬಾರಿ ಫಾಸ್ಟ್‌ಟ್ಯಾಗ್ ಪಡೆಯಲಾಗಿದೆ ಎಂಬುದು ಗೊತ್ತಾಯಿತು ಎಂದ ರಫೀಕ್, ನಿನ್ನೆ ರಾತ್ರಿಯಿಂದ ಸಮಸ್ಯೆ ಬಗೆಹರಿಯುತ್ತಿಲ್ಲ. ನಗದಿನಲ್ಲಿ ದುಪ್ಪಟ್ಟು ಟೋಲ್ ಕೊಡುತ್ತಾ ಹೋದರೆ ಬೆಂಗಳೂರಿಗೆ ಹೋಗುವಷ್ಟರಲ್ಲಿ ನನ್ನ ಕೂಲಿಗಿಂತ ಟೋಲ್ ಹಣವೇ ಹೆಚ್ಚಾಗಿರುತ್ತದೆ ಎಂದವರು ಹೇಳಿದ್ದಾರೆ.

ಹುಬ್ಬಳ್ಳಿಯಿಂದ ಬಂದಿದ್ದ ಪ್ರವೀಣ್ ಕಾರಿನ ಶೋರೂಂನಿಂದ ಫಾಸ್ಟ್‌ಟ್ಯಾಗ್ ಖರೀದಿಸಿದ್ದರು. ಆದರೆ, ಶೋರೂಂನವರು ಫಾಸ್ಟ್‌ಟ್ಯಾಗ್‌ನ ಕೆ.ವೈ.ಸಿ. ಪೂರ್ಣಗೊಳಿಸಿರಲಿಲ್ಲ. ಹೀಗಾಗಿ ಫಾಸ್ಟ್‌ಟ್ಯಾಗ್ ಬಳಸಲು ಬಾರದಂತಾಗಿದೆ.

ಪೇಟಿಎಂ ಮೂಲಕ ಫಾಸ್ಟ್‌ಟ್ಯಾಗ್ ರೀಚಾರ್ಜ್ ಮಾಡಿಸಲು ಹೋದಾಗ ಹೊಸ ಫಾಸ್ಟ್‌ಟ್ಯಾಗ್ ಖರೀದಿಯೇ ಆಯಿತು. ಹೊಸ ಫಾಸ್ಟ್‌ಟ್ಯಾಗ್ ಕಳಿಸಲಾಗುವುದು ಎಂದು ಪೇಟಿಎಂ ಸಂದೇಶ ಕಳಿಸಿದೆ. ಮುಂದೇನು ಎಂಬುದು ಗೊತ್ತಾಗುತ್ತಿಲ್ಲ ಎಂದು ಪ್ರವೀಣ್ ಹೇಳಿದರು.

ಈ ಹಿಂದೆ ಎರಡು - ಮೂರು ಬಾರಿ ಫಾಸ್ಟ್‌ಟ್ಯಾಗ್ ಕಡ್ಡಾಯದ ಗಡುವು ನೀಡಿದಾಗ ಮುಂದೂಡಿದ್ದರು. ಈ ಬಾರಿಯೂ ಹಾಗೇ ಆಗುತ್ತದೆ ಎಂದುಕೊಂಡಿದ್ದೆವು. ಆದರೆ, ನಾಲ್ಕೇ ದಿನಗಳಲ್ಲಿ ಫಾಸ್ಟ್‌ಟ್ಯಾಗ್ ಕಡ್ಡಾಯ ಎಂದು ಸಮಸ್ಯೆ ಮಾಡಿದ್ದಾರೆ. ನಮಗೆ ಸಮರ್ಪಕ ಮಾಹಿತಿ ಕೊಟ್ಟಿಲ್ಲ ಎಂದು ಹಲವಾರು ವಾಹನ ಚಾಲಕರು ದೂರುತ್ತಿದ್ದರು.

ಒಟ್ಟಾರೆ ಫಾಸ್ಟ್‌ಟ್ಯಾಗ್ ಕಡ್ಡಾಯದ ಮೊದಲ ದಿನ ಸಮಸ್ಯೆಗಳ ಸರಮಾಲೆ ಎದುರಾಗಿತ್ತು. ಮುಂಬರುವ ದಿನಗಳಲ್ಲಿ ಈ ಸಮಸ್ಯೆಗಳನ್ನು ಬಗೆಹರಿಸದೇ ಇದ್ದರೆ ಕ್ಯಾಶ್‌ಲೆಸ್‌ನ ಫಾಸ್ಟ್‌ಟ್ಯಾಗ್ ವ್ಯವಸ್ಥೆ ವಾಹನಗಳ ಮಾಲೀಕರಿಗೆ ತಲೆ ನೋವಾಗಲಿದೆ.




### ಬೇಜವಾಬ್ದಾರಿ ಫಾಸ್ಟ್‌ಟ್ಯಾಗ್ ಮಾರಾಟದಿಂದ ಸಮಸ್ಯೆ

ಫಾಸ್ಟ್‌ಟ್ಯಾಗ್ ಮಾರುವ ಹೊಣೆಯನ್ನು ಬ್ಯಾಂಕುಗಳಿಗೆ ವಹಿಸಲಾಗಿತ್ತು. ಬ್ಯಾಂಕುಗಳು ಈ ಜವಾಬ್ದಾರಿಯನ್ನು ಏಜೆನ್ಸಿಗಳಿಗೆ ವಹಿಸಿದ್ದಾರೆ. ಏಜೆನ್ಸಿಗಳು ಯುವಕರಿಗೆ ಹೊಣೆ ವರ್ಗಾಯಿಸಿ ಮಾರಾಟದ ಟಾರ್ಗೆಟ್ ನೀಡಿದ್ದಾರೆ. ಈ ಯುವಕರು ಟಾರ್ಗೆಟ್ ಮುಟ್ಟಲು ಬೇಕಾಬಿಟ್ಟಿಯಾಗಿ ಫಾಸ್ಟ್‌ಟ್ಯಾಗ್ ಮಾರಾಟ ಮಾಡಿದ್ದಾರೆ. ಕೆ.ವೈ.ಸಿ. ಮಾಹಿತಿಯನ್ನು ಅಪ್ಡೇಟ್ ಮಾಡಿಲ್ಲ ಎಂಬ ಆಕ್ಷೇಪಗಳು ಕೇಳಿ ಬಂದಿವೆ.

ಲಾರಿಗಳು ಎಷ್ಟು ಎಕ್ಸೆಲ್‌ನವು ಎಂಬುದನ್ನು ಸರಿಯಾಗಿ ತಿಳಿಸಿಲ್ಲ. ಒಂದೇ ವಾಹನಗಳಿಗೆ ಕೆಲವೊಮ್ಮೆ ಎರಡು - ಮೂರು ಫಾಸ್ಟ್‌ಟ್ಯಾಗ್ ಕೊಟ್ಟಿದ್ದಾರೆ. ರೀಚಾರ್ಜ್ ಮಾಡುವಾಗ ವ್ಯತ್ಯಾಸವಾಗಿರುತ್ತದೆ. ಕೆಲವೊಮ್ಮೆ ಲಘು ಮೋಟಾರು ವಾಹನಗಳನ್ನು ಲಾರಿ ಎಂದು ನಮೂದಿಸಿರುತ್ತಾರೆ. ಆ ಎಲ್ಲ ಸಮಸ್ಯೆಗಳು ಈಗ ಬೆಳಕಿಗೆ ಬರುತ್ತಿವೆ ಎಂದು ಹೆಬ್ಬಾಳು ಟೋಲ್‌ನ ಫಾಸ್ಟ್‌ಟ್ಯಾಗ್ ಮಾರಾಟಗಾರರೊಬ್ಬರು ಹೇಳಿದ್ದಾರೆ.

### ಹಣ ಕೊಡಬೇಕಿಲ್ಲ

**(1ನೇ ಪುಟದಿಂದ) ಪ್ರಯಾಣಿಕರಿಂದ ಯಾವುದೇ ಶುಲ್ಕ ಪಡೆಯುವುದಿಲ್ಲ ಎಂದು ಹೆಬ್ಬಾಳು ಟೋಲ್‌ನ ವ್ಯವಸ್ಥಾಪಕ ಬಿ.ಎನ್. ಮಾರುತಿ ತಿಳಿಸಿದ್ದಾರೆ. ಆದರೆ, ಫಾಸ್ಟ್‌ಟ್ಯಾಗ್ ನಲ್ಲಿ ಯಾವುದೇ ಸಮಸ್ಯೆ ಇದ್ದರೆ ಅದನ್ನು ಬಗೆಹರಿಸಲು ನೆರವಾಗುತ್ತೇವೆ. ಫಾಸ್ಟ್‌ಟ್ಯಾಗ್ ಇಲ್ಲದಿದ್ದರೆ ಪಡೆಯಲು ಟೋಲ್‌ನಲ್ಲಿ ನಾಲ್ಕು ಬ್ಯಾಂಕುಗಳಿಂದ ನಾಲ್ಕು ಕೇಂದ್ರಗಳು ಕಾರ್ಯ ನಿರ್ವಹಿಸುತ್ತಿವೆ. ಗ್ರಾಹಕರು ಇವುಗಳ ಸದ್ಬಳಕೆ ಪಡೆದುಕೊಳ್ಳಬೇಕು ಎಂದವರು ಹೇಳಿದ್ದಾರೆ.**

**ಸೈಟ್‌ಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ 30x50 ದಕ್ಷಿಣ,
ವಿನಾಯಕ ಬಡಾವಣೆಯಲ್ಲಿ 30x40 ದಕ್ಷಿಣ,
ಶಿವ ಪಾರ್ವತಿ ಬಡಾವಣೆಯಲ್ಲಿ 30x40 ಪಶ್ಚಿಮ.
ಶಾಮನೂರು ಧನ್ಯಕುಮಾರ್
97415 62589
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ ಪಕ್ಕ ವಿನಾಯಕ ಬಡಾವಣೆಯಲ್ಲಿ
80x60 ಪೂರ್ವ, ಬಸವೇಶ್ವರ
ಬಡಾವಣೆಯಲ್ಲಿ 2ನೇ ಮಹಡಿಯಲ್ಲಿ
ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬಾಡಿಗೆಗೆ ಇದೆ**
ಪಿ.ಜೆ.ಬಡಾವಣೆ 8ನೇ ಮುಖ್ಯ ರಸ್ತೆ, 8ನೇ ಕ್ರಾಸ್ ಡಾ. ಸಿದ್ದೇಶ್ ಬಿಲ್ಡಿಂಗ್ ನಲ್ಲಿ 3 ಸಾವಿರ ಚದುರಡಿ ಮೊದಲನೇ ಮಹಡಿ ಆಫೀಸ್, ಕ್ಲಿನಿಕ್, ಫಾರ್ಮ, ಬ್ಯಾಂಕುಗಳಿಗೆ ಬಾಡಿಗೆಗೆ ಇದೆ. ವಿಚಾರಿಸಿ.
ಮೊ. 94480-28103

**ಹೋಟೆಲ್‌ಗೆ ಕೆಲಸಗಾರರು ಬೇಕಾಗಿದ್ದಾರೆ**
ತಂದೂರಿ ರೋಟಿ, ತಂದೂರಿ ಚಿಕನ್ ಹಾಗೂ ಚೈನೀಸ್ ಐಟಮ್ಸ್ ಮಾಡಲು ಮತ್ತು ಹೋಟೆಲ್ ಕ್ಲೀನಿಂಗ್, ವೆಜಿಟೆಬಲ್ ಕಟ್ಟಿಂಗ್ ಹಾಗೂ ಸರ್ವೀಸ್ ಮಾಡಲು. ಎರಡು ವರ್ಷ ಅನುಭವವುಳ್ಳವರಿಗೆ ಪ್ರಥಮ ಆದ್ಯತೆ ಹಾಗೂ ಮ್ಯಾನೇಜರ್ ಹುದ್ದೆಗೆ ಬೇಕಾಗಿದ್ದಾರೆ.
97433 94285, 78754 28456

**ಮಾರಾಟಕ್ಕೆ**
SOG ಕಾಲೋನಿ ಮನೆ - 20×30, ವಿದ್ಯಾನಗರ ಮನೆ-30×50, ಶಕ್ತಿನಗರ ಮನೆ-30×40, ಭೂಮಿಕ ಲೇಔಟ್ ಮನೆ-20×32, ಚಿಕ್ಕಮಣಿ ದೇವರಾಜ ಅರಸು ಬಡಾವಣೆ ಮನೆ-20×30, ಸಿದ್ದಗಂಗಾ ಬಡಾವಣೆ ಮನೆ-30×40, SS ಲೇಔಟ್ ಮನೆ-30×40, 30×47
7899636597, 9916525828

**ಮನೆ ಬಾಡಿಗೆ/ಲೀಜ್‌ಗೆ**
ಹದಡಿ ರಸ್ತೆಯಲ್ಲಿ ಬ್ಯಾಂಕ್, ಕಛೇರಿ, ಟಿ.ವಿ. ಸ್ಟೇಷನ್, ಜಿಲ್ಲಾ ಪಂಚಾಯತ್, ಹೈಟೆಕ್ ಹಾಸ್ಪಿಟಲ್, ಲಲಿತ್ ಶಾಲೆ, ಶಶಿ ಸೋಪ್ ಫ್ಯಾಕ್ಟರಿ, ಲೋಕಿಕೆರೆ ರಸ್ತೆ ಸುಬ್ರಮಣ್ಯ ದೇವಸ್ಥಾನ ಹತ್ತಿರವಿರುವ, ನೀರು 24x7, ಕಾರ್ ಪಾರ್ಕಿಂಗ್, ವಾಸ್ತುವಿರುವಂತಹ 2 BHK ಮನೆ ಬಾಡಿಗೆಗೆ/ಲೀಜ್‌ಗೆ ಇದೆ (ಹಿಂದೂಗಳಿಗೆ) ವಿಚಾರಿಸಿ
99004 11110

**ಜಮೀನು ಮಾರಾಟಕ್ಕಿದೆ**
ಮಿಟ್ಲಕಟ್ಟೆ ಗ್ರಾಮದ ರಿ.ಸ.ನಂ.7/16 ರಲ್ಲಿ 19 ಗುಂಟೆ ಜಮೀನು ಸಾಯಿಬಾಬಾ ಮಂದಿರದ ಎದುರು ಶಾಮನೂರು-ದೇವರ ಬೆಳಕೆರೆ ಮುಖ್ಯ ರಸ್ತೆಗೆ ಹೊಂದಿಕೊಂಡಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ
95352 69849
87220 14318

**ಬೇಕಾಗಿದ್ದಾರೆ**
ಕ್ಲೀನರ್, ಲೇಡಿ ಕ್ಲೀನರ್, ಬಿಲ್ಲಿಂಗ್ ಆಪರೇಟರ್, ವೆಂಡರ್ ಸಂಪರ್ಕಿಸಿ.
ಹೋಟೆಲ್ ಫುಡೀಸ್
ಚರ್ಚ್ ರೋಡ್, ದಾವಣಗೆರೆ.
98861 56688
70195 85916

**ಮನೆ ಬಾಡಿಗೆಗಿದೆ**
ತರಳಬಾಳು ಬಡಾವಣೆ, ವಿದ್ಯಾನಗರ ಮುಖ್ಯರಸ್ತೆ 5ನೇ ಬಸ್‌ಸ್ಟಾಪ್ ಹತ್ತಿರದ 16ನೇ ಕ್ರಾಸ್‌ನಲ್ಲಿನ ಕಲ್ಲೇಶ್ವರ ಎಲೈಟ್‌ನಲ್ಲಿ 204, 206, 304 ಸಂಖ್ಯೆಯ 2BHK ಮನೆಗಳು ಬಾಡಿಗೆಗಿವೆ. ಸಂಪರ್ಕಿಸಿ :
98455-74143

**ಗಿರ್ ಹಸುವಿನ ಹಾಲು ದೊರೆಯುತ್ತದೆ.**
ಸಂಪರ್ಕಿಸಿ
99021 85212
70194 81919

**WANTED TEACHERS**
MSc/BSc, BEd (P.M & C.B) - 2
MA/BA B.Ed (ENG & S.S) - 2
BA/DEd - 2, BSc/DEd - 2
Address: Jnana Naivedya high School
Beereshwara Badavane, saraswati Nagar, Davanagere-04
98441 55585, 95911 11975

**ಬೇಕಾಗಿದ್ದಾರೆ**
ಖಾನಾವಳಿಯಲ್ಲಿ ರೊಟ್ಟಿ ಮತ್ತು ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ
99012 36631

**ಅಂಗಡಿ ಲೀಜ್/ಬಾಡಿಗೆಗೆ**
ಹಾಸಬಾವಿ ಸರ್ಕಲ್ ಹತ್ತಿರ
ಅಂಗಡಿ ಲೀಜ್/ಬಾಡಿಗೆಗೆ ಇದೆ
ಅಳತೆ :15x30. ವಿಚಾರಿಸಿ
89041 29928

**ಬೇಕಾಗಿದ್ದಾರೆ**
ದಾವಣಗೆರೆ ಹಾಗೂ ಸುತ್ತ-ಮುತ್ತ ಸೆಕ್ಯೂರಿಟಿ ಗಾರ್ಡ್, ಗನ್ ಮ್ಯಾನ್, ಸೆಕ್ಯೂರಿಟಿ ಸೂಪರ್ ವೈಸರ್ ಕೆಲಸ ಮಾಡಲು ಬೇಕಾಗಿದ್ದಾರೆ. ESI + PF ಸೌಲಭ್ಯವಿರುತ್ತದೆ. ಸಂಪರ್ಕಿಸಿ
70226 37701
72049 19232

**YOUR FUTURE IS IN YOUR HAND**
Part Time and Full Time Job Available 18 and Above age any qualification
Mob no :91102 99070

**TUITIONS FOR**
1st to 9th, Diploma & BE., with Notes
ಸಿಂಚನ ಅಕಾಡೆಮಿ
SBI ATM ಹತ್ತಿರ,
ರಾಂ & ಕೋ. ಸರ್ಕಲ್ ದಾವಣಗೆರೆ.
85532 78258, 88614 45913

**Professional make up Artist Course**
one Month Intense Bridal make up Course. Registration are open (only for ladies) certified course more information call
70190 73324

**ಬೇಕಾಗಿದ್ದಾರೆ**
Diploma ಅಗ್ರಿಕಲ್ಚರ್ or B.Sc ಅಗ್ರಿಕಲ್ಚರ್ ಆದವರು ಬೇಕಾಗಿದ್ದಾರೆ. ಸಂಪರ್ಕಿಸಿ
99454 22553
77601 55550

**ಡಾ|| ಆಲೂರು ಆಸ್ಪತ್ರೆ**
ಕಳೆದ ಒಂದು ವರ್ಷದಿಂದ 'ಕೋವಿಡ್-19' ಕಾರಣಕ್ಕಾಗಿ ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಆಸ್ಪತ್ರೆಯನ್ನು ಮುಚ್ಚಲಾಗಿತ್ತು. ಈಗ
ಡಾ|| ಮಂಜುನಾಥ್ ಆಲೂರುರವರು ಪ್ರತಿದಿನ ಮಧ್ಯಾಹ್ನ 12.30 ರಿಂದ 3.30, ಸಂಜೆ 7.30 ರಿಂದ 8.30 ಹಾಗೂ ಪ್ರತಿ ಭಾನುವಾರ ಬೆಳಿಗ್ಗೆ 8 ರಿಂದ 11 ರವರೆಗೆ ಲಭ್ಯವಿರುತ್ತಾರೆ. ಸಂಪರ್ಕಿಸಿ :
88677 75564

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್, ಪಾಂಪ್ಲೆಟ್ಸ್ ಹಂಚಲು SSLC ಅಥವಾ PUC Fail ಆದ ಯುವಕ, ಯುವತಿಯರು ಬೇಕಾಗಿದ್ದಾರೆ.
ವೇತನ-6000+1000 TA
ಗಂಗೋತ್ರಿ ವೆಲ್‌ನೆಸ್ ಸೆಂಟರ್
#34, ಮುರುಘಾರಾಜೇಂದ್ರ ಕಾಂಪ್ಲೆಕ್ಸ್, ನಿಟುವಳ್ಳಿ ರಸ್ತೆ, ಜಯದೇವ ಸರ್ಕಲ್, ದಾವಣಗೆರೆ.
86602 35013

**NEET KCET**
Navodaya Coaching
Limitted Seats Only
ಸಮೃದ್ಧಿ ಕೋಚಿಂಗ್ ಅಕಾಡೆಮಿ
63646 40296

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಕ್ಯಾಷಿಯರ್, ಸೇಲ್ಸ್ ಗರ್ಲ್ಸ್/ಬಾಯ್ಸ್ ಬೇಕಾಗಿದ್ದಾರೆ.
63631 97523

**ಶ್ರೀ ಸಾಯಿಬಾಲಾಜಿ ಜ್ಯೋತಿಷ್ಯಾಲಯ**
ಪಂಡಿತ್ ಸಾಯಿನಾಥ್ ಕುಡ್ಲ, Astrologer
ಅರಿತು ಅರಿಯದೆ, ತಿಳಿದು ತಿಳಿಯದೆ ಮಾಡಿದ ದೋಷಗಳಿಗೆ ಸಾಯಿನಾಥ್ ಅವರಿಂದ ಪರಿಹಾರ. ಇಂದೇ ಸಂಪರ್ಕಿಸಿ
ಇವರು ನಿಮ್ಮ ಜೀವನದ ಸಂಪೂರ್ಣ ಭವಿಷ್ಯವನ್ನು ಹೇಳುತ್ತಾರೆ. ವಿದ್ಯೆ, ಉದ್ಯೋಗ, ಮಾಟ-ಮಂತ್ರ, ವಶೀಕರಣ, ಸಾಲಬಾಧೆ, ಆರೋಗ್ಯ, ನೀವು ಇಷ್ಟ ಪಟ್ಟವರು ನಿಮ್ಮಂತೆ ಆಗಲು, ಗ್ರಹಚಾರ ದೋಷ ಇನ್ನೂ ನಿಮ್ಮ ಯಾವುದೇ ಗುಪ್ತ ಹಲವಾರು ಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ವಿಳಾಸ: ವಿದ್ಯಾನಗರ 1ನೇ ಬಸ್ ಸ್ಟಾಪ್ ಹತ್ತಿರ, ಕೆನರಾ ಬ್ಯಾಂಕ್ ಪಕ್ಕ, ದಾವಣಗೆರೆ.
ಮೊ: 95919 84627

**ಬೇಕಾಗಿದ್ದಾರೆ**
ಬಂಗಾರದ ಅಂಗಡಿಯಲ್ಲಿ ಸೇಲ್ಸ್ ವಿಭಾಗದಲ್ಲಿ ಕೆಲಸ ಮಾಡಲು PUC, B.Com ಆದಂತಹ ಯುವತಿಯರು ಬೇಕಾಗಿದ್ದಾರೆ. ವಯೋಮಿತಿ : 20 ರಿಂದ 25 (ಅವಿವಾಹಿತರು). ದಾವಣಗೆರೆ ನಗರದಲ್ಲಿ ವಾಸಿಸುವವರು ಮಾತ್ರ. ಸ್ವ-ವಿವರಗಳೊಂದಿಗೆ ಬೆಳಿಗ್ಗೆ 11 ರಿಂದ ಸಂಜೆ 7 ರವರೆಗೆ. ಸಂಪರ್ಕಿಸಿರಿ.
ಗುಪ್ತ ಗೋಲ್ಡ್ ಪ್ಯಾಲೇಸ್
ವಿಜಯಲಕ್ಷ್ಮಿ ರಸ್ತೆ, ದಾವಣಗೆರೆ.
80957 43423

**VS Paramedical college**
SSLC ಪಾಸ್/PUC- ಪಾಸ್ or ಫೇಲ್ ಆಗಿದ್ದೀರಾ ಚಿಂತಿಸಬೇಡಿ' course (DIPLOMA HEALTH INSPECTOR (DHI) ಕೆಲವೇ ಸೀಟುಗಳು ಮಾತ್ರ. SBI ATM ಹತ್ತಿರ, ರಾಮ್ ಅಂಡ್ ಕೋ ಸರ್ಕಲ್, ದಾವಣಗೆರೆ.
90195 80600
85532 78258

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day nutana collage road, Vidyanagara 2nd main, Davangere
77603 16576
90080 55813

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿ ಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, ಕೆ.ಎಸ್.ಆರ್.ಟಿ.ಸಿ. ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋನ್ : 96322 95561
ಸಮಯ: ಬೆಳಿಗ್ಗೆ 10ರಿಂದ ಮಧ್ಯಾಹ್ನ 2 ರವರೆಗೆ.

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826

**ಓಂ ಶ್ರೀ ದುರ್ಗಾದೇವಿ ಜ್ಯೋತಿಷ್ಯಾಲಯ**
ಪಂಡಿತ್ ಶ್ರೀ ಎಂ.ಜಿ.ರಾವ್
ನುಡಿದಂತೆ ನಡೆಯುವುದು ನಿಮ್ಮ ಯಾವುದೇ ಕಠಿಣ ಗುಪ್ತ ಸಮಸ್ಯೆ ಇದ್ದರೂ ಚಿಂತಿಸಬೇಡಿ, ಶ್ರೀ ದುರ್ಗಾದೇವಿ ಪೂಜಾ ಅನುಗ್ರಹದಿಂದ ಪರಿಹಾರ ಶತಸಿದ್ಧ. ಇಂದೇ ಭೇಟಿ ನೀಡಿ.
ಮನೆ ವಿಳಾಸ : ಹದಡಿ ರಸ್ತೆ, ಮೋರ್ ಎದುರು, ದಾವಣಗೆರೆ.
ಮೊ: 98807 73186

**ಡಾ|| ಮಹೇಶ್ ರಾಜಶೇಖರಯ್ಯ**
Hematologist ಇವರು
ದಿ. 17-02-2021ರ ಬುಧವಾರ ಬೆಳಿಗ್ಗೆ 10.00 ಗಂಟೆಯಿಂದ ದಾವಣಗೆರೆಯಲ್ಲಿ ಲಭ್ಯವಿರುತ್ತಾರೆ.
ಅನುಗ್ರಹ ಆಸ್ಪತ್ರೆ
ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆ.
08192-222292

**ಹೊಸ ಚೀಟಿ ಗುಂಪುಗಳು**
ಶ್ರೀ ಮಾರುತಿ ಚಿಟ್ ಫಂಡ್ಸ್ (ರಿ.)
ಕೆ.ಬಿ. ಬಡಾವಣೆ, ದಾವಣಗೆರೆ.
10,000x25=2,50,000/-
15,000x30=4,50,000/-
4000x25=1,00.000/-
7795149297, 9986122909

**ನೇರ ಪರೀಕ್ಷೆಗಳು**
DIRECT EXAMS
ಮನೆಯಲ್ಲೇ ಓದಿ ನೇರ ಪರೀಕ್ಷೆ ಬರೆಯುವ ಅವಕಾಶ
PUC SCIENCE, COMMERCE, ARTS
ಉನ್ನತ ಶಿಕ್ಷಣಕ್ಕೆ/ಸರ್ಕಾರಿ ಕೆಲಸಕ್ಕೆ ಮತ್ತು ಮುಂಬಡ್ತಿ ಪಡೆಯಲು ಉಪಯೋಗವಾಗುತ್ತದೆ.
ಮಾನಸ ಎಜುಕೇಷನ್ ಟ್ರಸ್ಟ್ (ರಿ.)
ಎಲ್.ಕೆ.ಕಾಂಪ್ಲೆಕ್ಸ್, 1ನೇ ಮಹಡಿ, ಅಶೋಕ ರಸ್ತೆ, 1ನೇ ಕ್ರಾಸ್, ದಾವಣಗೆರೆ.
97402 58276

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

# ಪುದುಚೆರಿಯಲ್ಲಿ ಬಹುಮತ ಕಳೆದುಕೊಂಡ ಕಾಂಗ್ರೆಸ್

ಪುದುಚೆರಿ, ಫೆ. 16 – ಕೇಂದ್ರಾಡಳಿತ ಪ್ರದೇಶ ಪುದುಚೆರಿಯ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಇನ್ನೊಬ್ಬ ಶಾಸಕ ರಾಜೀನಾಮೆ ನೀಡಿದ್ದು, ಪಕ್ಷ ಬಹುಮತ ಕಳೆದುಕೊಂಡಿದೆ. ಹಾಲಿ 28 ಸದಸ್ಯರ ವಿಧಾನಸಭೆಯಲ್ಲಿ ಕಾಂಗ್ರೆಸ್ ನೇತೃತ್ವದ ಮೈತ್ರಿಕೂಟ 14 ಸದಸ್ಯರನ್ನು ಮಾತ್ರ ಹೊಂದಿದೆ.

ಕೇಂದ್ರಾಡಳಿತ ಪ್ರದೇಶದ ಒಟ್ಟು ಸಂಖ್ಯಾಬಲ 33 ಆಗಿದೆ. ಆದರೆ, ಪ್ರಸಕ್ತ 28 ಶಾಸಕರು ಮಾತ್ರ ಇದ್ದಾರೆ. ಪ್ರತಿಪಕ್ಷಗಳೂ ಸಹ 14 ಶಾಸಕರನ್ನು ಹೊಂದಿವೆ. ಸರ್ಕಾರ ಅಲ್ಪಮತಕ್ಕಿಳಿದಿರುವುದರಿಂದ ಮುಖ್ಯಮಂತ್ರಿ ವಿ. ನಾರಾಯಣಸ್ವಾಮಿ ರಾಜೀನಾಮೆ ನೀಡಬೇಕೆಂದು ಪ್ರತಿಪಕ್ಷಗಳು ಒತ್ತಾಯಿಸಿವೆ. ಆದರೆ, ಬೇಡಿಕೆ ತಳ್ಳಿ ಹಾಕಿರುವ ನಾರಾಯಣಸ್ವಾಮಿ, ತಮ್ಮ ಸರ್ಕಾರಕ್ಕೆ ವಿದಾನಸಭೆಯಲ್ಲಿ ಬಹುಮತ ಇದೆ ಎಂದಿದ್ದಾರೆ. ಕೆಲವೇ ತಿಂಗಳಲ್ಲಿ ರಾಜ್ಯಕ್ಕೆ ಚುನಾವಣೆ ನಡೆಯಲಿದೆ.

ಕಾಂಗ್ರೆಸ್ ಶಾಸಕ ಎ. ಜಾನ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದಾರೆ. ಕಳೆದ ಒಂದು ತಿಂಗಳಿನಿಂದ ಕಾಂಗ್ರೆಸ್ ಪಕ್ಷದ ನಾಲ್ವರು ಶಾಸಕರು ರಾಜೀನಾಮೆ ನೀಡಿದ್ದಾರೆ.

ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಪುದುಚೆರಿಗೆ ಬರುವ ಮುನ್ನಾ ದಿನವೇ ಸರ್ಕಾರ ಬಹುಮತ ಕಳೆದುಕೊಂಡಿದೆ.

# ರೈತ ಮತ್ತೊಬ್ಬರಿಗೆ ಕೊಡುವವನೇ ಹೊರತು, ಬೇಡುವವನಲ್ಲ

## ಬಲ್ಲೂರು ಗ್ರಾಮದಲ್ಲಿನ ಚಿಂತನ-ಮಂಥನ ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ




ದಾವಣಗೆರೆ, ಫೆ.16- ರೈತ ಮತ್ತೊಬ್ಬರಿಗೆ ಕೊಡುವವನೇ ಹೊರತು ಬೇಡುವ ಗುಣದವನಲ್ಲ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ತಾಲ್ಲೂಕಿನ ಬಲ್ಲೂರು ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತರ ಸಂಘ ಹಾಗೂ ಹಸಿರು ಸೇನೆ, ಡಿಸಿಸಿ ಬ್ಯಾಂಕ್ ಆಶ್ರಯದಲ್ಲಿ ನಿನ್ನೆ ಹಮ್ಮಿಕೊಳ್ಳಲಾಗಿದ್ದ ಚಿಂತನ ಮಂಥನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರದ ಸೌಲಭ್ಯಗಳನ್ನು ಉಪಯೋಗಿಸಿ ಕೊಂಡು, ಆಧುನಿಕ ಕೃಷಿ ಪದ್ಧತಿಯಿಂದ ಉತ್ತಮ ಫಸಲು ಪಡೆದು ಆರ್ಥಿಕವಾಗಿ ಸದೃಢರಾಗಬೇಕು ಎಂದು ರೈತರಿಗೆ ಕರೆ ನೀಡಿದರು.

ಯಾವ ಕಾರಣಕ್ಕೂ ಆತ್ಮಹತ್ಯೆಯಂತಹ ಕಾರ್ಯಗಳಿಗೆ ಮುಂದಾಗಬೇಡಿ. ಧೈರ್ಯದಿಂದ ಬದುಕಬೇಕು. ನಿಮ್ಮ ಸಮಸ್ಯೆಗಳಿಗೆ ಪರಿಹಾರ ನೀಡಲು ಜಿಲ್ಲಾಡಳಿತ ಸದಾ ಸಿದ್ಧವಿದೆ ಎಂದು ಭರವಸೆ ನೀಡಿದರು.

ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ರೈತ ಮುಖಂಡ ಬಲ್ಲೂರು ರವಿಕುಮಾರ್, ಇದೊಂದು ಮಾದರಿ ಕಾರ್ಯಕ್ರಮವಾಗಿದ್ದು, ಪ್ರತಿ ಗ್ರಾ.ಪಂ. ವ್ಯಾಪ್ತಿಯಲ್ಲೂ ನಡೆಯಬೇಕು. ರೈತರು ಹಾಗೂ ಕೃಷಿ ಕಾರ್ಮಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಜಿಲ್ಲಾ ಪಂಚಾಯ್ತಿ ಸಿಇಒ ಪದ್ಮಾ ಬಸವಂತಪ್ಪ ಮಾತನಾಡಿ, ಗಾಂಧೀಜಿಯವರಂತೆ ಸರಳತೆ, ಸ್ವಚ್ಛತೆ, ಸತ್ಯ, ಪ್ರಾಮಾಣಿಕತೆಯ ಬದುಕನ್ನು ರೂಢಿಸಿಕೊಂಡರೆ ನೆಮ್ಮದಿ ಜೀವನ ಸಾಗಿಸಲು ಸಾಧ್ಯವಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹನುಮಂತರಾಯ ಮಾತನಾಡಿ, ಜೀವನದಲ್ಲಿ ತಾಳ್ಮೆ ಮುಖ್ಯ. ಅನಗತ್ಯವಾಗಿ ಗಲಾಟೆ ಮಾಡಿಕೊಂಡು ಜೀವನ ಹಾಳು ಮಾಡಿಕೊಳ್ಳಬಾರದು. ಸಮಸ್ಯೆ, ಎದುರಾದರೆ 122 ಸಂಖ್ಯೆಗೆ ಕರೆ ಮಾಡುವಂತೆ ಸಲಹೆ ನೀಡಿದರು.

ಅಣಬೇರು ಕುಮಾರಸ್ವಾಮಿ ನಿರೂಪಿಸಿದರು. ರೈತರ ಸಂಘದ ನಾಯಕರುಗಳಾದ ಆರ್.ಎಸ್. ಪ್ರಸಾದ್, ಇಟಗಿ ಬಸವರಾಜಪ್ಪ, ಅಶೋಕ ಗೌಡ, ಬಲ್ಲೂರು ಮಂಜುನಾಥ ಹಾಗೂ ಇತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಡುಗೆ ಕೋಣೆ ಸಂಪೂರ್ಣವಾಗಿ ಹಾಳಾಗಿ, ಮಳೆಗಾಲದಲ್ಲಿ ಸೋರುತ್ತಿದೆ. ಅದನ್ನು ಹೊಸದಾಗಿ ನಿರ್ಮಿಸಿಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

# ತಹಶೀಲ್ದಾರ್‌ಗೆ ಪಂಚಾಯಿತಿ ಸದಸ್ಯರು-ಪಕ್ಷಗಳ ಮುಖಂಡರ ತರಾಟೆ



ಸಭೆಗೆ ಕರೆದು ಜನಪ್ರತಿನಿಧಿಗಳಿಗೆ ಅವಮಾನ: ಆರೋಪ

ದಾವಣಗೆರೆ, ಫೆ.16- ಸಭೆಗೆ ಬರುವಂತೆ ಜನಪ್ರತಿನಿಧಿಗಳನ್ನು ಕರೆದು ತಹಶೀಲ್ದಾರ್ ಅವಮಾನ ಮಾಡಿರುವುದಾಗಿ ಆರೋಪಿಸಿ ತಹಶೀಲ್ದಾರ್ ಗಿರೀಶ್ ಅವರನ್ನು ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಸದಸ್ಯರು, ವಿವಿಧ ಪಕ್ಷಗಳ ಮುಖಂಡರು ಬಹಿರಂಗವಾಗಿ ತರಾಟೆಗೆ ತೆಗೆದುಕೊಂಡ ಘಟನೆ ನಗರದ ತಾಲ್ಲೂಕು ಕಚೇರಿಯಲ್ಲಿಂದು ಸಂಜೆ ನಡೆದಿದೆ.

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಕ್ಷೇತ್ರ ವ್ಯಾಪ್ತಿಯ ವಿಸ್ತೀರ್ಣ ಭೌಗೋಳಿಕ ಕ್ಷೇತ್ರ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ಗ್ರಾಮಗಳ ಸೇರ್ಪಡೆ ಹಾಗೂ ಕೈ ಬಿಡುವ ಕುರಿತಂತೆ ಚರ್ಚಿಸಲು ಮತ್ತು ಆಕ್ಷೇಪಣೆ ತಕರಾರು ಸಂಬಂಧ ಮುಕ್ತವಾಗಿ ಮಾತನಾಡಲು ತಹಶೀಲ್ದಾರ್ ಕಚೇರಿಗೆ ಸಂಜೆ ಆಗಮಿಸುವಂತೆ ತಾಲ್ಲೂಕಿನ ಬಾಡಾ, ಮಾಯಕೊಂಡ, ಹದಡಿ, ಸೇರಿದಂತೆ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಸದಸ್ಯರು, ವಿವಿಧ ಪಕ್ಷಗಳ ಮುಖಂಡರಿಗೆ ಸಭೆ ಕರೆಯಲಾಗಿತ್ತು ಎನ್ನಲಾಗಿದೆ.

ಅದರಂತೆ ಕಾಂಗ್ರೆಸ್ ಮುಖಂಡ ಕೆಂಗೋ ಹನುಮಂತಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಬಿ.ಎಂ. ಸತೀಶ್, ಬಿ.ಟಿ. ಸಿದ್ದಪ್ಪ ಜಿಲ್ಲಾ ಪಂಚಾಯತ್ ಸದಸ್ಯರಾದ ಹದಡಿ ನಿಂಗಪ್ಪ, ಶೈಲಜಾ ಬಸವರಾಜ್, ಮಾಜಿ ಸದಸ್ಯರಾದ ಟಿ.ಕೆ. ಬಸವರಾಜಪ್ಪ, ಗೋವಿಂದ ಹಾಲೇಕಲ್, ಕುಕ್ಕುವಾಡ, ಶಿರಮಗೊಂಡನಹಳ್ಳಿ ರುದ್ರೇಶ್ ಸೇರಿದಂತೆ ಇತರೆ ಗ್ರಾಮಗಳ ಮುಖಂಡರು ತಾಲ್ಲೂಕು ಕಚೇರಿಗೆ ಆಗಮಿಸಿದ್ದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಗಿರೀಶ್ ಅವರು ಅಧಿಕಾರಿಗಳ ಸಭೆ ನಡೆಸುತ್ತಿದ್ದರು. ಆಗ ಎಲ್ಲರೂ ಅರ್ಧ ಗಂಟೆಗೂ ಹೆಚ್ಚು ಸಮಯ ಕಾದಿದ್ದಾರೆ. ನಂತರ ಈ ವಿಚಾರ ತಹಶೀಲ್ದಾರ್ ಗಮನಕ್ಕೆತಂದಾಗ,ಜನಪ್ರತಿನಿಧಿಗಳಯಾವುದೇ ಸಭೆ ಕರೆದಿಲ್ಲ ಎಂದು ತಹಶೀಲ್ದಾರ್ ತಿಳಿಸಿದ್ದಾರೆ. ಈ ಮಾತುಗಳಿಂದ ಅಸಮಾಧಾನಗೊಂಡ ಜಿಲ್ಲಾ ಪಂಚಾಯ್ತಿ ಸದಸ್ಯೆ ಶೈಲಜಾ ಬಸವರಾಜ್ ಮತ್ತಿತರರು ತಹಶೀಲ್ದಾರ್ ಗಿರೀಶ್ ಅವರನ್ನು ತರಾಟೆಗೆ ತೆಗೆದುಕೊಂಡು, ಅವರ ನಡೆಯನ್ನು ಖಂಡಿಸಿದ್ದಾರೆ.

ಎಲ್ಲಾ ಜನಪ್ರತಿನಿಧಿಗಳು ಸಭೆಗೆ ಬರುವಂತೆ ಕರೆದಿದ್ದರು. ಸಮಯಕ್ಕೆ ಸರಿಯಾಗಿ ಬಂದರೂ ಸಹ ಸಭೆ ನಡೆಸದೇ ತಹಶೀಲ್ದಾರ್ ನಮ್ಮನ್ನೆಲ್ಲಾ ಕಾಯಿಸಿದ್ದಾರಲ್ಲದೇ, ಹಿರಿಯರೆಲ್ಲಾ ಬಂದರೂ ಸೌಜನ್ಯಕ್ಕೂ ಗಣನೆಗೆ ತೆಗೆದುಕೊಂಡಿಲ್ಲ. ಅಲ್ಲದೇ, ಸಭೆಯನ್ನೇ ಕರೆದಿಲ್ಲ ಎಂದು ಹೇಳುವ ಮೂಲಕ ತಹಶೀಲ್ದಾರ್ ಜನ ಪ್ರತಿನಿಧಿಗಳಿಗೆ ಅವಮಾನ ಮಾಡಿದ್ದಾರೆ ಎಂದು ಜಿಲ್ಲಾ ಪಂಚಾಯತ್ ಸದಸ್ಯೆ ಶೈಲಜಾ ಬಸವರಾಜ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

### ಆರೋಪಕ್ಕೆ ತಹಶೀಲ್ದಾರ್ ಸ್ಪಷ್ಟನೆ

ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಕ್ಷೇತ್ರ ವ್ಯಾಪ್ತಿಯ ವಿಸ್ತೀರ್ಣ ಭೌಗೋಳಿಕ ಕ್ಷೇತ್ರ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ಗ್ರಾಮಗಳ ಸೇರ್ಪಡೆ ಹಾಗೂ ಕೈ ಬಿಡುವ ಕುರಿತಂತೆ ಚರ್ಚಿಸಲು ಮತ್ತು ಆಕ್ಷೇಪಣೆ ಸಂಬಂಧ ಮುಕ್ತವಾಗಿ ಮಾತನಾಡಲು ನಿನ್ನೆ ಸೋಮವಾರವೇ ಸಭೆ ಕರೆಯಲಾಗಿತ್ತು. ಸುಮಾರು 70ಕ್ಕೂ ಹೆಚ್ಚು ಜನ ಸಭೆಯಲ್ಲಿ ಭಾಗವಹಿಸಿದ್ದು, ಇದು ದಾಖಲೆ ಸಹಿತ ಇದೆ. ಗ್ರಾಮಗಳ ಸೇರ್ಪಡೆ ಹಾಗೂ ಕೈ ಬಿಡುವ ಬಗ್ಗೆ ಆಕ್ಷೇಪಣೆ ಇದ್ದರೆ ತಿಳಿಸಿದರೆ, ಅದನ್ನು ಪರಿಶೀಲಿಸಿ ಕಾನೂನು ಪ್ರಕಾರ ಮುಂದುವರೆಯುವುದಾಗಿ ಸಭೆಯಲ್ಲಿ ಹೇಳಿದ್ದೇನೆ. ಆದರೆ ಕೆಲವರು ಜಾತಿ, ಪಕ್ಷ ಮುಂದಿಟ್ಟುಕೊಂಡು ತಾವು ಹೇಳಿದಂತೆ ಗ್ರಾಮಗಳ ಸೇರ್ಪಡೆ ಮಾಡುವಂತೆ ಒತ್ತಡ ಹಾಕಿದ್ದಾರೆ. ನಾನು ಕಾನೂನು ಮೀರಿ ನಡೆಯುವಂತಿಲ್ಲ. ಕಾನೂನು ಧಿಕ್ಕರಿಸಿ ಹೇಳಿದಂತೆ ಮಾಡಲು ಸಾಧ್ಯವಿಲ್ಲ. ಇದನ್ನು ಅರ್ಥಮಾಡಿಕೊಳ್ಳಬೇಕಿದೆ. ಇಂದು ನಾನು ಸಭೆಗೆ ಆಹ್ವಾನಿಸಿರಲಿಲ್ಲ ಎಂದು ತಹಶೀಲ್ದಾರ್ ಬಿ.ಎನ್. ಗಿರೀಶ್ 'ಜನತಾವಾಣಿ'ಗೆ ಸ್ಪಷ್ಟಪಡಿಸಿದ್ದಾರೆ.

# ಹೈಕೋರ್ಟ್ ಮಾಜಿ ಮುಖ್ಯ ನ್ಯಾ|| ರಾಮ ಜೋಯಿಸ್ ನಿಧನ



ಬೆಂಗಳೂರು, ಫೆ. 16- ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ, ಜಾರ್ಖಂಡ್ ಹಾಗೂ ಬಿಹಾರದ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದ್ದ ನ್ಯಾಯಮೂರ್ತಿ ಎಂ. ರಾಮ ಜೋಯಿಸ್ ಇಂದು ನಿಧನ ಹೊಂದಿದರು. ಅವರಿಗೆ 89 ವರ್ಷ ವಯಸ್ಸಾಗಿತ್ತು.

ಕಾನೂನು ವಿದ್ವಾಂಸರಾಗಿದ್ದ ಅವರು ಸಂವಿಧಾನ ತಜ್ಞರಾಗಿದ್ದರು, ಭಾರತದ ಹಲವು ಹೈಕೋರ್ಟ್‌ಗಳಲ್ಲಿ ನ್ಯಾಯಾಧೀಶರಾಗಿ, ಮುಖ್ಯ ನ್ಯಾಯಾಧೀಶರಾಗಿ ಅನೇಕ ಐತಿಹಾಸಿಕ ತೀರ್ಪುಗಳನ್ನು ನೀಡಿದ ಗೌರವ ಇವರದ್ದಾಗಿದೆ.

ನ್ಯಾಯಮೂರ್ತಿ ಜೋಯಿಸ್ ರಾಜ್ಯಸಭೆ ಸದಸ್ಯರಾಗಿ ಮೇಲ್ಮನೆಯ ಗೌರವವನ್ನು ಹೆಚ್ಚಿಸಿದ್ದರಲ್ಲದೆ, ಪ್ರಾಚೀನ ಭಾರತದ ನ್ಯಾಯಿಕ ವ್ಯವಸ್ಥೆ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದ ಅವರು, ಸದನದಲ್ಲಿ ಭಾರತೀಯ ಗ್ರಂಥಗಳಲ್ಲಿನ ಸಂಸ್ಕೃತ ಶ್ಲೋಕಗಳನ್ನು ಉಲ್ಲೇಖಿಸಿ ಅರ್ಥ ಹೇಳುತ್ತಿದ್ದರು.

ಅಧ್ಯಯನಶೀಲರೂ ಆಗಿದ್ದ ನ್ಯಾಯಮೂರ್ತಿ ಜೋಯಿಸ್, 'ಧರ್ಮ ದಿ ಗ್ಲೋಬಲ್ ಎಥಿಕ್', 'ಲೀಗಲ್ ಅಂಡ್ ಕಾನ್‌ಸ್ಟಿಟ್ಯೂಶನಲ್ ಹಿಸ್ಟರಿ ಆಫ್ ಇಂಡಿಯಾ', 'ಹಿಸ್ಟಾರಿಕಲ್ ಬ್ಯಾಟಲ್', 'ನೀಡ್ ಫಾರ್ ಅಮೆಂಡಿಂಗ್ ಕಾನ್‌ಸ್ಟಿಟ್ಯೂಶನಲ್', 'ಕೋಡ್ ಆಫ್ ಕಂಡೆಕ್ಟ್ ಫಾರ್ ರೂಲರ್ಸ್' ಮುಂತಾದ ಪುಸ್ತಕಗಳನ್ನು ಬರೆದಿದ್ದರು.

ನ್ಯಾಯಮೂರ್ತಿ ಜೋಯಿಸ್ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಡಿ.ವಿ. ಸದಾನಂದಗೌಡ, ಅವರೊಂದಿಗಿನ ಒಡನಾಟವನ್ನು ನೆನಪಿಸಿಕೊಂಡಿದ್ದು, ತಾವು ರಾಜ್ಯ ಬಿಜೆಪಿ ಅಧ್ಯಕ್ಷ ಹಾಗೂ ಮುಖ್ಯಮಂತ್ರಿಯಾಗಿದ್ದಾಗ ಹಲವು ಬಾರಿ ನ್ಯಾಯಮೂರ್ತಿ ಜೋಯಿಸ್ ಅವರಿಂದ ಕಾನೂನು ಸಲಹೆ ಪಡೆದಿದ್ದಾಗಿ ಸ್ಮರಿಸಿದ್ದಾರೆ.

ನ್ಯಾಯಮೂರ್ತಿ ಜೋಯಿಸ್ ಅವರ ನಿಧನದಿಂದ ನ್ಯಾಯ-ನೀತಿಯ ಪ್ರತಿಪಾದಕರೊಬ್ಬರನ್ನು ಸಮಾಜ ಕಳೆದುಕೊಂಡಂತಾಗಿದೆ ಎಂದಿದ್ದಾರೆ.

# ಮೋಜಿಣಿ ತಂತ್ರಾಂಶ: ಅಳತೆ ಕಾರ್ಯ ತಾತ್ಕಾಲಿಕ ಸ್ಥಗಿತಕ್ಕೆ ನಿರ್ಧಾರ



ದಾವಣಗೆರೆ, ಫೆ.16- ಕರ್ನಾಟಕ ರಾಜ್ಯ ಸರ್ಕಾರಿ ಪರವಾನಗಿ ಸಂಘದ ನಿರ್ಧಾರದಂತೆ ಬೇಡಿಕೆಗಳು ಈಡೇರಿಸುವವರೆಗೆ ರಾಜ್ಯಾದ್ಯಂತ ಮೋಜಿಣಿ ತಂತ್ರಾಂಶದಲ್ಲಿ ಬರುವ ಎಲ್ಲಾ ಆಡಳಿತ ಕಾರ್ಯಗಳನ್ನು ಸ್ಥಗಿತಗೊಳಿಸಲು ನಿರ್ಧರಿಸಿರುವುದಾಗಿ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸಂಘದ ಪರವಾಗಿ ಮನವಿ ಸಲ್ಲಿಸಲಾಯಿತು.

ಈ ಹಿಂದೆ ಮುಷ್ಕರ ಕೈಗೊಂಡಾಗ ಪ್ರತಿಭಟನಾ ಸ್ಥಳಕ್ಕೆ ಆಯುಕ್ತರು ಆಗಮಿಸಿ, ನಮ್ಮ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತಂದು ಈಡೇರಿಸಲು ಶ್ರಮಿಸುವುದಾಗಿ ಭರವಸೆ ನೀಡಿದ್ದರು. ಆದರೆ ಇದುವರೆವಿಗೂ ಈಡೇರದ ಕಾರಣ ಆಯುಕ್ತರು ನಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೆ ತಾಲ್ಲೂಕಿನ ಎಲ್ಲಾ ಪರವಾನಗಿ ಭೂಮಾಪಕರುಗಳು ರಾಜ್ಯ ಪರವಾನಗಿ ಭೂಮಾಪಕರ ಸಂಘದ ನಿರ್ದೇಶನ ಬರುವವರೆಗೂ ಮೋಜಿಣಿ ತಂತ್ರಾಂಶದ ಅಳತೆ ಕಾರ್ಯಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸುವುದಾಗಿ ತಿಳಿಸಿದ್ದಾರೆ.

ಮನವಿಯನ್ನು ಜಿ.ವಿ. ರಾಜಶೇಖರ್ ಸೇರಿದಂತೆ ತಾಲ್ಲೂಕಿನ ಪರವಾನಗಿ ಭೂಮಾಪಕರುಗಳು ಹಾಜರಿದ್ದರು.

# ಪ್ರೇರಣೆಯಿಂದ ಏನನ್ನಾದರೂ ಸಾಧಿಸಬಹುದು



ದಾವಣಗೆರೆ, ಫೆ.16- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಾಣಿಜ್ಯ ಶಾಸ್ತ್ರ ಸ್ನಾತಕೋತ್ತರ ವಿಭಾಗದ ಹೊಸ ವಿದ್ಯಾರ್ಥಿಗಳಿಗೆ ಸ್ವಾಗತ ಹಾಗೂ ಹಳೆಯ ವಿದ್ಯಾರ್ಥಿಗಳನ್ನು ಬೀಳ್ಕೊಡಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಕಾಲೇಜು ಪ್ರಾಂಶುಪಾಲ ತೂ.ಕ. ಶಂಕರಯ್ಯ ಮಾತನಾಡಿ, ಪ್ರೇರಣೆಯಿಂದ ಏನನ್ನಾದರೂ ಸಾಧಿಸಬಹುದು ಎಂದು ಅಭಿಪ್ರಾಯಪಟ್ಟರು. ವಾಣಿಜ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಶಂಕರ್ ಆರ್. ಶೀಲಿ, ಕನ್ನಡ ವಿಭಾಗದ ಪ್ರಾಧ್ಯಾಪಕ ಗಿರಿಸ್ವಾಮಿ ಹಿತನುಡಿಗಳನ್ನಾಡಿದರು. ಇದೇ ವೇಳೆ 2020 ಕರ್ನಾಟಕ ರಾಜ್ಯ ಉಪನ್ಯಾಸಕ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಕಾಲೇಜಿನ 13 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪ್ರೊ. ಮಂಜಣ್ಣ, ಪ್ರೊ. ಪ್ರಕಾಶ್, ಪ್ರೊ. ಲಕ್ಷ್ಮಣ್, ಪ್ರೊ. ಯಶೋಧ, ಪ್ರೊ. ಶ್ಯಾಮಲಾ, ಚೈತ್ರಾ, ಚನ್ನಬಸಪ್ಪ, ಕನ್ನಕಟ್ಟೆ ಜಯಣ್ಣ, ಶಂಭುಲಿಂಗಪ್ಪ, ಆರ್.ಸಿ. ನಾಗರಾಜ್, ರವಿ ಸಿಂಗ್ ಇನ್ನಿತರರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕಾವ್ಯ ಪ್ರಾರ್ಥಿಸಿದರು. ನಿಶಾರಾಣಿ ಸ್ವಾಗತಿಸಿದರು. ಅನುಷಾ ವಂದಿಸಿದರು. ದಾಕ್ಷಾಯಣಿ ಸನ್ಮಾನ ಕಾರ್ಯಕ್ರಮ ನೆರವೇರಿಸಿಕೊಟ್ಟರು. ಬಸವರಾಜ್ ಮತ್ತು ಯಶಸ್ವಿನಿ ನಿರೂಪಿಸಿದರು.

# ನಗರದಲ್ಲಿ ಇಂದು ವಿಚಾರ ಸಂಕಿರಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಸಂಜೀವಿನಿ ಮಹಿಳಾ ಮತ್ತು ಮಕ್ಕಳ ಸಬಲೀಕರಣ ಸಂಸ್ಥೆ, ಸ್ಲಂ ಜನಾಂದೋಲನ ಕರ್ನಾಟಕ, ಸಾವಿತ್ರಿ ಬಾಪುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿ ಸಂಯುಕ್ತಾಶ್ರಯದಲ್ಲಿ ರಮಾಬಾಯಿ ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ವಿಚಾರ ಸಂಕಿರಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವು ಇಂದು ಬೆಳಿಗ್ಗೆ 11.30 ಕ್ಕೆ ಎಸ್.ಎಂ.ಕೃಷ್ಣ ನಗರದ ಬಾಬು ಜಗಜೀವನ್ ರಾಂ ಭವನದಲ್ಲಿ ನಡೆಯಲಿದೆ.

ಎಲ್.ಹೆಚ್.ಅರುಣ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಚಂದ್ರಮ್ಮ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಸ್.ಎಲ್.ಆನಂದಪ್ಪ, ರೇಷ್ಮಾ ಕೌಸರ್, ರವಿಚಂದ್ರ, ಸಿ.ಬಸವರಾಜ್ ಪಾಲ್ಗೊಳ್ಳುವರು.

# ಬೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿ ಜಾತ್ರಾ ಮಹೋತ್ಸವದ ಹಂದರ ಪೂಜೆ

ದಾವಣಗೆರೆ, ಫೆ.16- ನಗರದ ಬೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿ ಹಾಗೂ ಭೂತಪ್ಪ ಸ್ವಾಮಿಯ ಜಾತ್ರಾ ಮಹೋತ್ಸವದ ಅಂಗವಾಗಿ ಹಂದರಗಂಬದ ಪೂಜೆಯನ್ನು ಇದೇ ದಿನಾಂಕ 19ರ ಶುಕ್ರವಾರ ಬೆಳಿಗ್ಗೆ 9.30 ಕ್ಕೆ ನೆರವೇರಿಸಲಾಗುವುದು.

# ನಗರದಲ್ಲಿ ಇಂದು 'ಬೆಳಕು ಬಿಂದು-2020' ಉದ್ಘಾಟನೆ

ದೃಶ್ಯಕಲಾ ಮಹಾವಿದ್ಯಾಲಯದ ದೃಶ್ಯವಿಶ್ವ ಕಲಾಗ್ಯಾಲರಿಯಲ್ಲಿ ಇಂದು ಬೆಳಿಗ್ಗೆ 10 ಗಂಟೆಗೆ ಐತಿಹಾಸಿಕ ಸ್ಥಳಗಳ ಛಾಯಾಚಿತ್ರ ಕಲೆಯ ಸಮೂಹ ಪ್ರದರ್ಶನ 'ಬೆಳಕು ಬಿಂದು-2020' ಉದ್ಘಾಟನಾ ಕಾರ್ಯಕ್ರಮ ಜರುಗಲಿದೆ.

ದಾವಣಗೆರೆ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಸ್.ವಿ. ಹಲಸೆ ಕಾರ್ಯಕ್ರಮ ಉದ್ಘಾಟಿಸುವರು. ಚಿತ್ರಕಲಾ ವಿಭಾಗದ ನಿವೃತ್ತ ಮುಖ್ಯಸ್ಥ, ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ಪುರಸ್ಕೃತ ಬಿ.ಆರ್. ಕೊರ್ತಿ, ದಾವಿವಿಯ ಕುಲಸಚಿವರಾದ (ಆಡಳಿತ) ಪ್ರೊ. ಗಾಯತ್ರಿ ದೇವರಾಜ, ಮತ್ತೋರ್ವ ಕುಲಸಚಿವರಾದ (ಪರೀಕ್ಷಾಂಗ) ಡಾ. ಹೆಚ್.ಎಸ್. ಅನಿತಾ, ದಾವಿವಿ ಹಣಕಾಸು ಅಧಿಕಾರಿ ಡಿ. ಪ್ರಿಯಾಂಕ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

# ಬಾಪೂಜಿ ಹೈಟೆಕ್ ಎಜುಕೇಷನ್ ಕಾಲೇಜಿನಲ್ಲಿ ಇಂದು ಕಾರ್ಯಾಗಾರ

ಬಾಪೂಜಿ ಹೈಟೆಕ್ ಎಜುಕೇಷನ್ ಕಾಲೇಜಿನಲ್ಲಿ ಇಂದು ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಪ್ರೊಜೆಕ್ಟ್ ಡೆವೆಲಪ್‌ಮೆಂಟ್ ಬಗ್ಗೆ ಕಾರ್ಯಾಗಾರವನ್ನು ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಬಿ.ಡಿ.ಟಿ ಇಂಜಿನಿಯರಿಂಗ್ ಕಾಲೇಜಿನ ಡಾ. ಶ್ರೀಧರ್ ಕೆ.ಎಸ್. ಉದ್ಘಾಟಿಸುವರು. ಸಂಪನ್ಮೂಲ ವ್ಯಕ್ತಿಗಳಾಗಿ ರಂಜಿತ್ ನಾಯರ್, ಅಜಯ್ ಲಿಂಗೇಶ್ ಆಗಮಿಸುವರು. ಪ್ರಾಂಶುಪಾಲ ಡಾ. ಬಿ. ವೀರಪ್ಪ ಅಧ್ಯಕ್ಷತೆ ವಹಿಸುವರು ಎಂದು ಸಂಯೋಜಕರಾದ ಮುನವಳ್ಳಿ ಮಠ್ ಕೆ.ಎಸ್ ತಿಳಿಸಿದ್ದಾರೆ.

# ಸುಣಕಲ್ಲುಬಿದರಿ : ಕಬಡ್ಡಿ ಪಂದ್ಯ

ರಾಣೇಬೆನ್ನೂರು, ಫೆ.16- ಸ್ನೇಹ ಜೀವಿ ಗೆಳೆಯರ ಬಳಗದಿಂದ ಇದೇ ದಿನಾಂಕ 21 ರ ಭಾನುವಾರ ಸಂಜೆ ಗ್ರಾಮೀಣ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪಂದ್ಯಾವಳಿ ನಡೆಯಲಿದೆ. ವಿಜೇತರಿಗೆ ಪ್ರಥಮ ಬಹುಮಾನ 15,001 ಮತ್ತು ಆಕರ್ಷಕ ಟ್ರೋಫಿ ಇದೆ. ದ್ವಿತೀಯ 10,000 ಹಾಗೂ ಮೂರನೆಯ ಬಹುಮಾನ 5,001 ಹಾಗೂ ಟ್ರೋಫಿ ನೀಡಲಾಗುವುದು.

# ತಾಲ್ಲೂಕಿನಲ್ಲಿ ಇಂದು ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ 66/11ಕೆವಿ ಆವರಗೆರೆ ಮತ್ತು 66/11 ಕಾಡಜ್ಜಿ ವಿತರಣಾ ಕೇಂದ್ರಗಳಿಂದ ಹೊರಡುವ ಎಲ್ಲಾ 11 ಕೆವಿ ಮಾರ್ಗಗಳಿಗೆ ಸಂಬಂಧಿಸಿದ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ನಗರದಲ್ಲಿ ನಾಡಿದ್ದು ಕುರಿ ಮತ್ತು ಮೇಕೆ ಸಾಕಾಣಿಕೆಯ ತರಬೇತಿ

ದಾವಣಗೆರೆ ಫೆ.16 - ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ಪಶು ಆಸ್ಪತ್ರೆ ಆವರಣದಲ್ಲಿರುವ ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರದಲ್ಲಿ ಇದೇ ದಿನಾಂಕ 19 ರಿಂದ 22 ರವರೆಗೆ ಕುರಿ ಮತ್ತು ಮೇಕೆ ಸಾಕಾಣಿಕೆ ಕುರಿತು ಉಚಿತ ತರಬೇತಿ ಕಾರ್ಯಕ್ರಮ ನಡೆಯಲಿದೆ. ಆಸಕ್ತಿಯುಳ್ಳ ರೈತರು, ಮಹಿಳೆಯರು, ನಿರುದ್ಯೋಗಿ ಯುವಕ/ಯುವತಿಯರು ಇದರ ಅನೂಕೂಲ ಪಡೆಯಬಹುದು ಎಂದು ಪಶುವೈದ್ಯಕೀಯ ಸಹಾಯಕರ ತರಬೇತಿ ಕೇಂದ್ರದ ಮುಖ್ಯ ಪಶುವೈದ್ಯಾಧಿಕಾರಿಗಳು ತಿಳಿಸಿದ್ದಾರೆ.




# ಮುರುಘಾಮಠ : ನೌಕರರ ರಾಜೀನಾಮೆ

## ಇತಿ ಮಿತಿ ಮೀರಿದರೆ ಶಿಸ್ತು ಕ್ರಮ: ಮುರುಘಾ ಶರಣರ ಸ್ಪಷ್ಟನೆ

ದಾವಣಗೆರೆ, ಫೆ. 15- ಮುರುಘಾ ಮಠದಲ್ಲಿ ತಮ್ಮ ಇತಿಮಿತಿ ಮೀರಿ ವರ್ತಿಸುವವರಿಗೆ ಶಿಸ್ತಿನ ಕ್ರಮ ಇರುತ್ತದೆ. ಅದರಂತೆ ಮಠದಲ್ಲಿ ಕೆಲಸ ಮಾಡುವ ಹತ್ತು ಜನರು ರಾಜೀನಾಮೆ ನೀಡಿದ್ದಾರೆ ಎಂದು ಚಿತ್ರದುರ್ಗ ಮುರುಘಾ ಮಠದ ಶ್ರೀ ಶಿವಮೂರ್ತಿ ಮುರುಘಾ ಶರಣರು ಹೇಳಿದ್ದಾರೆ.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕು ತಿಂಗಳ ಹಿಂದೆ ಮಠಕ್ಕೆ ಸಂಬಂಧಿಸಿದಂತೆ ವದಂತಿಯೊಂದು ಹಬ್ಬಿತ್ತು. ಅದು ದೊಡ್ಡ ಅಪರಾಧಕ್ಕೆ ಅವಕಾಶ ಆಗಬಾರದು ಎಂಬ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು.

ಐತಿಹಾಸಿಕ ಮುರುಘಾಮಠ ಒಂದು ಸಂಸ್ಥೆಯಾಗಿ ಬೆಳೆದು ಬಂದಿದೆ. ಒಂದು ಸಂಸ್ಥೆಯಲ್ಲಿ ಸಾವಿರಾರು ಜನರು ಕಾರ್ಯನಿರ್ವಹಿಸುತ್ತಾರೆ. ಅವರ ಸ್ವಭಾವ ಒಂದೇ ರೀತಿ ಇರುವುದಿಲ್ಲ. ಭಿನ್ನವಾಗಿರುತ್ತದೆ. ಇತಿ ಮಿತಿ ಮೀರಿದರೆ ಶಿಸ್ತು ಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಮಠಕ್ಕೆ, ಶರಣರಿಗೆ ಸಾಮಾಜಿಕ ಬದ್ಧತೆ ಇದೆ. ಇದರ ಆಧಾರದ ಮೇರೆಗೆ ಮಠ ಕಟ್ಟಲಾಗುತ್ತಿದೆ' ಮುರುಘಾ ಮಠವನ್ನು ರಕ್ತ ಸಂಬಂಧದಿಂದ ಮುಕ್ತಗೊಳಿಸಲು, ಮಠದ ಘನತೆ ಮತ್ತು ಗೌರವ ಕಾಪಾಡುವ ಉದ್ದೇಶದಿಂದ ಇಂತಹ ಕ್ರಮ ಅನಿವಾರ್ಯ ಎಂದವರು ಹೇಳಿದ್ದಾರೆ.

# ಪಾಲಿಕೆ : ಬಾಡಿಗೆ ಕಟ್ಟದ 30 ಮಾಂಸದಂಗಡಿಗಳಿಗೆ ಬೀಗ

ದಾವಣಗೆರೆ, ಫೆ.16- ನಗರ ಪಾಲಿಕೆಯ ಮಳಿಗೆಗಳ ಬಾಡಿಗೆ ವಸೂಲಾತಿ ಕಾರ್ಯಕ್ರಮ ಮುಂದುವರೆದಿದ್ದು, ಮಂಗಳವಾರ ಬಾರ್‌ಲೈನ್ ರಸ್ತೆಯಲ್ಲಿನ 30 ಮಾಂಸದ ಅಂಗಡಿಗಳಿಗೆ ಬೀಗ ಹಾಕಲಾಯಿತು. ಈ ಮಳಿಗೆಗಳಿಂದ 10.89 ಲಕ್ಷ ರೂ. ಬಾಕಿ ಬರಬೇಕಿತ್ತು. ಹೀಗಾಗಿ, ಪಾಲಿಕೆ ಸಿಬ್ಬಂದಿಗಳು ಅಲ್ಲಿಗೆ ತೆರಳಿ ಬೀಗ ಹಾಕಿದ್ದಾರೆ.

**38 ಲಕ್ಷ ವಸೂಲಾತಿ :** ಕಳೆದ ಮೂರು ದಿನಗಳಿಂದ ಪಾಲಿಕೆಯ ಮಳಿಗೆಗಳ ಬಾಡಿಗೆ ವಸೂಲಾತಿ ಮಾಡಲಾಗುತ್ತಿದ್ದು, ಸುಮಾರು 38 ಲಕ್ಷ ರೂ. ವಸೂಲಾಗಿದೆ ಎಂದು ಪಾಲಿಕೆ ಕಂದಾಯ ವಿಭಾಗದ ಪಿ. ವೆಂಕಟೇಶ್ ತಿಳಿಸಿದ್ದಾರೆ.

# ಮಂಜಿನಿಂದ ರಸ್ತೆ ಕಾಣದೇ ಲಾರಿ ಪಲ್ಟಿ





ದಾವಣಗೆರೆ, ಫೆ.16- ಜ್ಯೂಸ್ ಪ್ಯಾಕೆಟ್‌ಗಳು ತುಂಬಿದ ಲಾರಿ ಪಲ್ಟಿ ಯಾಗಿದ್ದು, ಜನರು ಜ್ಯೂಸ್ ಬಾಟಲ್‌ಗಳನ್ನು ಹೊತ್ತೊಯ್ದಿರುವ ಘಟನೆ ಚನ್ನಗಿರಿ ತಾಲ್ಲೂಕಿನ ಬೆಂಕಿಕೆರೆ ಕ್ರಾಸ್ ಬಳಿ ಇಂದು ನಡೆದಿದೆ.

**ಜ್ಯೂಸ್ ಪ್ಯಾಕೆಟ್‌ಗಳನ್ನು ಹೊತ್ತೊಯ್ದ ಜನ**

ಮೈಸೂರಿನಿಂದ ಗೋವಾಗೆ ಜ್ಯೂಸ್ ಪ್ಯಾಕ್‌ಗಳನ್ನು ತೆಗೆದುಕೊಂಡು ಹೋಗುತ್ತಿದ್ದ ಲಾರಿಯ ಚಾಲಕನಿಗೆ ಮಂಜಿನಿಂದಾಗಿ ದಾರಿ ಕಾಣದೆ ರಸ್ತೆ ಬದಿಯ ಗುಂಡಿಗೆ ಇಳಿದ ಪರಿಣಾಮ ಪಲ್ಟಿಯಾಗಿದೆ.

ಪರಿಣಾಮ ಲಾರಿಯಲ್ಲಿದ್ದ ಜೂಸ್ ಪ್ಯಾಕ್‌ಗಳು ಚೆಲ್ಲಾ ಪಿಲ್ಲಿಯಾಗಿ ಬಿದ್ದಿವೆ. ಈ ವೇಳೆ ಜನರು ಜ್ಯೂಸ್ ಬಾಟಲ್‌ಗಳನ್ನು ಹೊತ್ತೊಯ್ದಿದ್ದಾರೆ ಎಂದು ಸ್ಥಳೀಯರು ಹೇಳಿದ್ದಾರೆ.

ಅಪಘಾತದಲ್ಲಿ ಅದೃಷ್ಟವಶಾತ್ ಯಾವುದೇ ಪ್ರಾಣ ಹಾನಿಯಾಗಿಲ್ಲ. ಚನ್ನಗಿರಿ ಪೊಲೀಸ್ ಠಾಣೆಯ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ನಗರದಲ್ಲಿ ಗಾಂಧಿ ಭವನ ನಿರ್ಮಾಣ ಸಂಪೂರ್ಣ

## ಮುಂದಿನ ಪೀಳಿಗೆಗೆ ಇದು ಗಾಂಧೀಜಿ ಜೀವನ ದರ್ಶನದ ತಾಣ




ದಾವಣಗೆರೆ, ಫೆ. 16 - ಒಂದೂವರೆ ಶತಮಾನದ ಹಿಂದೆ ಜನಿಸಿದ್ದ ಮಹಾತ್ಮ ಗಾಂಧೀಜಿಯವರ ಜೀವನಾದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವ ಉದ್ದೇಶದೊಂದಿಗೆ ರೂಪುಗೊಂಡಿರುವ ನಗರದ ಗಾಂಧಿ ಭವನ ಉದ್ಘಾಟನೆಯ ಹಂತಕ್ಕೆ ತಲುಪಿದೆ. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಜಿಲ್ಲಾ ಕೇಂದ್ರದಲ್ಲಿ ಗಾಂಧಿ ಭವನ ನಿರ್ಮಿಸಲಾಗಿದೆ.

ಎಸ್.ಎಸ್. ಹೈಟೆಕ್ ಆಸ್ಪತ್ರೆ ಸಮೀಪದ ರಾಮನಗರದಲ್ಲಿ ಸುಮಾರು ಮೂರು ಕೋಟಿ ರೂ. ವೆಚ್ಚದಲ್ಲಿ 1 ಎಕರೆ ಜಾಗದಲ್ಲಿ ನಿರ್ಮಾಣಗೊಂಡಿರುವ ಗಾಂಧಿ ಭವನ, ಗಾಂಧೀಜಿ ಜೀವನದ ಹೋರಾಟದ ಹಲವಾರು ಹಂತಗಳನ್ನು ಬಿಂಬಿಸುತ್ತಿದೆ.

ವಸ್ತು ಪ್ರದರ್ಶನಾಲಯ, ಗ್ರಂಥಾಲಯ, ಸಭಾಂಗಣ ಇತ್ಯಾದಿ ಸೌಲಭ್ಯಗಳ ಜೊತೆಗೆ ಗ್ರಾನೈಟ್ ಹಾಗೂ ಸಿಮೆಂಟ್‌ನಿಂದ ರೂಪಿಸಲಾಗಿರುವ ಮನಸೂರೆಗೊಳ್ಳುವ ಪ್ರತಿಮೆಗಳು ಗಾಂಧಿ ಜೀವನದ ಚಿತ್ರಣ ಬಿಂಬಿಸುತ್ತಿವೆ.

ಗಾಂಧೀಜಿ ನೇತೃತ್ವದಲ್ಲಿ ನಡೆದ ದಂಡಿ ಯಾತ್ರೆ ಬಿಂಬಿಸುವ ಸಿಮೆಂಟ್ ಕಲಾಕೃತಿ ಸರಣಿ ಈ ಕೇಂದ್ರದ ಪ್ರಮುಖ ಆಕರ್ಷಣೆಯಂತಿದೆ. ಗಾಂಧೀಜಿ ಹಾಗೂ ಪತ್ನಿ ಕಸ್ತೂರಿಬಾ ಅವರ ಪ್ರತಿಮೆಗಳು ಒಂದೆಡೆಯಿದ್ದರೆ, ಭವನದ ಕೇಂದ್ರದಲ್ಲಿ ಗ್ರಾನೈಟ್‌ನಿಂದ ತಯಾರಿಸಲಾದ ಭವ್ಯ ಪ್ರತಿಮೆ ಇದೆ. ಇದನ್ನು 22 ಲಕ್ಷ ರೂ.ಗಳ ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಕೆಂಪು ಹಂಚು ಹೊಂದಿರುವ ಭವನದ ಸುತ್ತಲಿನ ಭೂವಿನ್ಯಾಸವು ಹಸಿರಿನ ಹೊದಿಕೆಯಲ್ಲಿದೆ. ಉದ್ಯಾನವನದ ಕೇಂದ್ರದಲ್ಲಿ ಧ್ಯಾನಮಗ್ನರಾದ ಗಾಂಧಿ ಪ್ರತಿಮೆ ಇದ್ದರೆ, ಸುತ್ತಲೂ ಮಗುವೊಂದನ್ನು ಓದಿಸುವ, ರಾಷ್ಟ್ರದ ನೇತಾರನನ್ನು ಪುಟಾಣಿಯೋರ್ವ ಮುನ್ನಡೆಸುವ, ಗಾಂಧೀಜಿ ತಮ್ಮ ಸಹಾಯಕಿಯರೊಂದಿಗೆ ಸಾಗುವ ಕಲಾಕೃತಿಗಳು ಇಲ್ಲಿವೆ.

ಇಲ್ಲಿನ ಕಲಾಕೃತಿಗಳನ್ನು ಶಿವಮೊಗ್ಗದ ಕಲಾವಿದರಾದ ಪರಶುರಾಮ ಮತ್ತು ಎಂ.ಡಿ. ಹೊನ್ನಮ್ಮನವರ್ ಹಾಗೂ ಸಹಾಯಕರು ನಿರ್ಮಿಸಿದ್ದಾರೆ. 2019ರ ಜೂನ್‌ನಲ್ಲಿ ಈ ಭವನದ ಕಾಮಗಾರಿ ಆರಂಭವಾಗಿದ್ದು, ಫೆಬ್ರವರಿ 2021ಕ್ಕೆ ಪೂರ್ಣಗೊಂಡಿದೆ.

ಭವನದ ಉದ್ಘಾಟನೆಗಾಗಿ ದಿನಾಂಕ ನಿಗದಿಗೆ ಇಲಾಖೆಯ ಕೇಂದ್ರ ಕಚೇರಿಗೆ ಪತ್ರ ಬರೆಯಲಾಗಿದೆ. ಉತ್ತರದ ನಿರೀಕ್ಷೆಯಲ್ಲಿದ್ದೇವೆ ಎಂದು ಗಾಂಧಿ ಭವನದ ಸದಸ್ಯ ಕಾರ್ಯದರ್ಶಿಯೂ ಆಗಿರುವ ಜಿಲ್ಲಾ ವಾರ್ತಾಧಿಕಾರಿ ಡಿ. ಅಶೋಕ್ ಕುಮಾರ್ ತಿಳಿಸಿದ್ದಾರೆ.

ಮಹಾತ್ಮ ಗಾಂಧೀಜಿ ಅವರ ತತ್ವಾದರ್ಶಗಳನ್ನು ಜನತೆಗೆ ತಲುಪಿಸುವ ಕಾರ್ಯವನ್ನು ವಾರ್ತಾ ಇಲಾಖೆ ನಿರಂತರವಾಗಿ ಮಾಡಿಕೊಂಡು ಬಂದಿದೆ. ಮುಂದುವರೆದ ಭಾಗವಾಗಿ ಮುಂದಿನ ಪೀಳಿಗೆಗೆ ಗಾಂಧೀಜಿ ತತ್ವಾದರ್ಶಗಳನ್ನು ತಿಳಿಸಲು ಗಾಂಧಿ ಭವನ ನಿರ್ಮಿಸಿದೆ ಎಂದು ಅಶೋಕ್ ಕುಮಾರ್ ಹೇಳಿದ್ದಾರೆ.

**ಮುಂದಿನ ಪೀಳಿಗೆಗೆ ಆದರ್ಶ, ಚಿಂತನೆ, ಧ್ಯೇಯೋದ್ದೇಶ ತಿಳಿಸಲು ವಾರ್ತಾ ಇಲಾಖೆ ಯಾವಾಗಲೂ ಬದ್ಧವಾಗಿದೆ. ಗಾಂಧೀಜಿ ಚಿಂತನೆಗಳು ಸಾರ್ವಕಾಲಿಕ. ಇಂತಹ ಚಿಂತನೆಗಳನ್ನು ಗಾಂಧಿ ಭವನ ತಿಳಿಸುವ ಜೊತೆಗೆ, ಭವನ ಪ್ರೇಕ್ಷಣೀಯ ಸ್ಥಳವೂ ಆಗಲಿದೆ. ಗಾಂಧೀಜಿ ಜೀವನದ ಸಮಗ್ರ ದರ್ಶನವೂ ಆಗಲಿದೆ.**


**- ಡಿ. ಅಶೋಕ್ ಕುಮಾರ್,** ಜಿಲ್ಲಾ ವಾರ್ತಾಧಿಕಾರಿ







# ನಗರಕ್ಕೆ ಇಂದು ವೇಮಾನಂದ ಶ್ರೀ



ದಾವಣಗೆರೆ ಜಿಲ್ಲಾ ರೆಡ್ಡಿ ಜನಸಂಘದ ವತಿಯಿಂದ ಇಂದು ಸಂಜೆ 6.30 ಕ್ಕೆ ವಿದ್ಯಾನಗರ ಈಶ್ವರ-ಪಾರ್ವತಿ-ಗಣಪತಿ ದೇವಸ್ಥಾನದ ಪಕ್ಕದಲ್ಲಿರುವ ಆವರಣದಲ್ಲಿ ನಡೆಯುವ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭಕ್ಕೆ ಸಮಾಜದ ಗುರುಗಳಾದ ಶ್ರೀ ವೇಮಾನಂದ ಮಹಾಸ್ವಾಮೀಜಿ ಆಗಮಿಸಲಿದ್ದು, ಸಂಘದ ಅಧ್ಯಕ್ಷ ಕೆ. ವೆಂಕಟರಾಮಿ ರೆಡ್ಡಿ ಅಧ್ಯಕ್ಷತೆ ವಹಿಸಲಿದ್ದಾರೆ.

# ಕೇರಳದಿಂದ ಬರುವವರಿಗೆ ಕೊರೊನಾ ಪರೀಕ್ಷೆ ಕಡ್ಡಾಯ

ಬೆಂಗಳೂರು, ಫೆ. 16 – ಕೇರಳದಿಂದ ಬರುವವರಿಗೆ ರಾಜ್ಯ ಸರ್ಕಾರ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಆರ್.ಟಿ. - ಪಿಸಿಆರ್ ಪರೀಕ್ಷೆಯ ನೆಗೆಟಿವ್ ಪ್ರಮಾಣ ಪತ್ರ ಹೊಂದಿರುವುದನ್ನು ಕಡ್ಡಾಯಗೊಳಿಸಿದೆ. 72 ಗಂಟೆಗಳ ಒಳಗಿನ ನೆಗೆಟಿವ್ ಹೊಂದಿರುವುದು ಕಡ್ಡಾಯವಾಗಲಿದೆ. ರಾಜ್ಯಕ್ಕೆ ಬರುವವರು ಹೋಟೆಲ್, ರೆಸಾರ್ಟ್, ಹಾಸ್ಟೆಲ್, ಹೋಂ ಸ್ಟೇ ಹಾಗೂ ವಸತಿ ನಿಲಯಗಳಲ್ಲಿ ಉಳಿದುಕೊಳ್ಳುವವರಿಗೆ ಪರೀಕ್ಷಾ ವರದಿ ಕಡ್ಡಾಯವಾಗಿದೆ.

# ಪುದುಚೆರಿ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿ ವಜಾ



ನವದೆಹಲಿ, ಫೆ. 16 – ಹಠಾತ್ ಬೆಳವಣಿಗೆಯಲ್ಲಿ ಪುದುಚೆರಿಯ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿ ಅವರನ್ನು ತೆಗೆದು ಹಾಕಲಾಗಿದೆ. ಕಾಂಗ್ರೆಸ್ ಶಾಸಕರ ರಾಜೀನಾಮೆ ಯಿಂದಾಗಿ ವಿ. ನಾರಾಯಣಸ್ವಾಮಿ ಸರ್ಕಾರ ಬಿಕ್ಕಟ್ಟು ಎದುರಿಸುತ್ತಿರುವ ಸಮಯದಲ್ಲೇ ಕಿರಣ್ ಬೇಡಿ ವಜಾಗೊಳಿಸಲಾಗಿದೆ.

ಈ ಬಗ್ಗೆ ರಾಷ್ಟ್ರಪತಿ ಭವನದ ವಕ್ತಾರ ಅಜಯ್ ಕುಮಾರ್ ಸಿಂಗ್ ಸಂಕ್ಷಿಪ್ತ ಹೇಳಿಕೆ ನೀಡಿದ್ದು, ಬೇಡಿ ಇನ್ನು ಮುಂದೆ ಪುದುಚೆರಿಯ ಲೆಫ್ಟಿನೆಂಟ್ ಗವರ್ನರ್ ಆಗಿರುವುದಿಲ್ಲ ಎಂದು ರಾಷ್ಟ್ರಪತಿ ನಿರ್ದೇಶನ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಪುದುಚೆರಿಯ ಹೊಣೆಯನ್ನು ತೆಲಂಗಾಣದ ರಾಜ್ಯಪಾಲ ತಮಿಳಿಸೈ ಸೌಂದರರಾಜನ್ ಅವರಿಗೆ ವಹಿಸಲಾಗಿದೆ. ಬೇಡಿ ಹಾಗೂ ನಾರಾಯಣಸ್ವಾಮಿ ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಈ ಹಿಂದೆ ಚಕಮಕಿ ನಡೆಸಿದ್ದರು.

# ಶಿವಾಜಿ ಜಯಂತಿ : ನಗರದಲ್ಲಿ ಇಂದು ರಂಗೋಲಿ ಸ್ಪರ್ಧೆ

ಶ್ರೀ ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಶ್ರೀ ಶಿವಛತ್ರಪತಿ ಶಿವಾಜಿ ಮಹಾರಾಜರ 394ನೇ ಜಯಂತ್ಯೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ 3.30 ಕ್ಕೆ ಶಿವಾಜಿ ಸರ್ಕಲ್‌ನಲ್ಲಿರುವ ದುರ್ಗಾಂಬಿಕಾ ದೇವಸ್ಥಾನದಲ್ಲಿ ರಂಗೋಲಿ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ವಿವರಗಳಿಗೆ ಗೌರಬಾಯಿ (99160 09666), ಅನುಸೂಯಬಾಯಿ ಜಾಧವ್ (82170 45735), ಪದ್ಮ ಜಾಧವ್ (76762 58628), ಚೇತನ ಶಿವಕುಮಾರ್ (97312 89333), ನಾಗರತ್ನ ಕಾಟೆ (97318 23444) ಅವರುಗಳನ್ನು ಸಂಪರ್ಕಿಸಬಹುದು.

# ಮಧ್ಯಪ್ರದೇಶದಲ್ಲಿ ಕಾಲುವೆಗೆ ಬಸ್ ಉರುಳಿ 45 ಜನರ ಸಾವು

ಸಿದ್ಧಿ/ರೇವಾ, ಫೆ. 16 – ಮಧ್ಯ ಪ್ರದೇಶದ ಸಿದ್ಧಿ ಜಿಲ್ಲೆಯಲ್ಲಿ ಬಸ್ ಒಂದು ಕಾಲುವೆಯಲ್ಲಿ ಉರುಳಿ ಕನಿಷ್ಠ 45 ಜನರು ಸಾವನ್ನಪ್ಪಿದ್ದಾರೆ. ಮೃತರಲ್ಲಿ 20 ಮಹಿಳೆಯರು ಸೇರಿದ್ದಾರೆ. ಸತ್ನಾದಿಂದ ಸಿದ್ಧಿಗೆ ಬರುತ್ತಿದ್ದ ಬಸ್ ಪಟ್ನ ಎಂಬ ಹಳ್ಳಿಯಲ್ಲಿ ಕಾಲುವೆಗೆ ಉರುಳಿದೆ. ಅಪಘಾತದಲ್ಲಿ ಬದುಕುಳಿದವರ ಶೋಧಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇದುವರೆಗೂ 45 ಜನರ ಮೃತದೇಹಗಳು ಪತ್ತೆಯಾಗಿವೆ. ಇವರಲ್ಲಿ 24 ಪುರುಷರು, 20 ಮಹಿಳೆಯರು ಹಾಗೂ ಒಂದು ಮಗು ಸೇರಿದೆ. ಅಪಘಾತದ ನ್ಯಾಯಾಂಗ ತನಿಖೆಗೆ ಆದೇಶ ಹೊರಡಿಸಲಾಗಿದೆ.ಕಿಕ್ಕಿರಿದು ತುಂಬಿದ್ದ ಬಸ್ ಸಿದ್ಧಿಯಿಂದ ಸತ್ನಾಗೆ ತೆರಳುತ್ತಿತ್ತು. ಬೆಳಿಗ್ಗೆ 8.30ಕ್ಕೆ ರಸ್ತೆಯಿಂದ ಜಾರಿದ ಬಸ್, ಕಾಲುವೆಗೆ ಉರುಳಿದೆ.

ಅಪಘಾತದ ಬಗ್ಗೆ ಶೋಕ ವ್ಯಕ್ತಪಡಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಪರಿಹಾರ ನೀಡುವುದಾಗಿ ತಿಳಿಸಿದ್ದಾರೆ.










॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

## 24ನೇ ವರ್ಷದ ಪುಣ್ಯಸ್ಮರಣೆ

**ಲಿಂ॥ ಶಾಮನೂರು ಶಿವಪ್ಪನವರು**

ಲಿಂಗೈಕ್ಯ : 17.02.1997



ನೀವು ನಮ್ಮನ್ನಗಲಿ 24 ವರ್ಷಗಳು ಸಂದವು. ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲೇ ಮುನ್ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ


**ಶ್ರೀ ಶಾಮನೂರು ಜಯಣ್ಣ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳು.**

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥

## 24ನೇ ವರ್ಷದ ಪುಣ್ಯಸ್ಮರಣೆ

ಕಾಯಕದಿಂದ ಕೈಲಾಸ

**ಲಿಂ॥ ಶಾಮನೂರು ಶಿವಪ್ಪನವರು**



ಲಿಂಗೈಕ್ಯ : 17.02.1997ರ ಸೋಮವಾರ

ನೀವು ನಮ್ಮನ್ನಗಲಿ 24 ವರ್ಷಗಳಾದವು. ನಮಗೆ ಸದಾ ಮಾರ್ಗದರ್ಶಿಗಳಾಗಿದ್ದು, ನನ್ನ ಮತ್ತು ನನ್ನ ಕುಟುಂಬ ವರ್ಗದ ಹಿತೈಷಿಗಳಾಗಿದ್ದ ಹಾಗೂ ನಗರದ ಗಣ್ಯ ವರ್ತಕರೂ, ಲಿಂಗವಂತ ಸಮಾಜದ ಮುಖಂಡರೂ ಆಗಿದ್ದ

**ಶರಣ ಶಾಮನೂರು ಶಿವಪ್ಪ** ನವರ 24ನೇ ವರ್ಷದ ಪುಣ್ಯಸ್ಮರಣೆಯ ಸಂದರ್ಭದಲ್ಲಿ, ತಮ್ಮನ್ನು ಸದಾ ಸ್ಮರಿಸುವ

**ದಿ॥ ಆಲೂರು ಬಸವರಾಜಪ್ಪ ಮತ್ತು ಮಕ್ಕಳು ಹಾಗೂ ಮೊಮ್ಮಕ್ಕಳು, ದಾವಣಗೆರೆ.**

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte